SRI BHEEMANNA S. KHANDRE.—I only want to enlighten the House that this will become null and void. The Civil Judge uses the power of the District Judge. District Judge himself cannot hear the appeals. That is the clarification I want to have.

SRI L. G. HAVANUR.—With utmost respect to the hon'ble Member, I would like to say that we are not dealing with the provision relating to appeals and revisions. It is a matter totally extraneous to the present amendment. So, I need not answer it.

MR. SPEAKER.—I will put the Bill to the vote of the House. The question is :—

"That the Karnataka Civil Courts (Amendment) Bill, 1978, as passed by the Legislative Council, be passed."

The motion was adopted and the Bill was passed

KARNATAKA STATE UNIVERSITIES (AMENDMENT) BILL, 1978 as passed by L. C.

Motion to consider

SRI B. SUBBAYYA SHETTY (Minister for Eduction).— Sir, I beg to move, that the Karnataka State Universities (Amendment) Bill, 1978. be taken into consideration.

The question was proposed

Sir, this amending Bill is a consequential and enabling amendment. In section 21 there is provision to elect five representatives of students and there is no provision as to how this election should be conducted. So, to enable that, this consequential amendment has been brought. In a similar way there is section 54 where in there is provision for recognition of certain institution for special purposes and to make the scop wider this amendment has been brought.

In clause 6, there is mention of Director of Languages and Development of Kannada. But that department was bifurcated into Department of Kannada and Culture and Department of Translation. So, to substitute the Department of Kannada and Culture this amendment is brought. This is a simple Bill and I commend this to the House.

† ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).— ಅಧ್ಯಕ್ಷರೇ, ಇಲ್ಲಿ ವಿನಾಗಿದೆ ಅಂದರೆ ಯೂನಿವರ್ಸಿಟಿ ಆಕ್ಟಗಳ ಒಂದು ಇತಿಹಾಸವೇ ಹೊರಟು ಹೋಗಿದೆ. ಸರ್ಕಾರಕ್ಕೆ ಒಂದು ಸ್ಪಷ್ಟೀಕರಣ ಕೇಳಬಯಸುತ್ತೇನೆ, ಒಂದು ಸಲ ಸೆನೆಟ್‌ಗೆ ಚುನಾವಣೆ ಆಯಿತು ಸೆನೆಟ್ ಮೀಟಿಂಗ್ ಕೂಡುವುದಕ್ಕೆ ಮುಂಚೆ ೧೯೭೬ರಲ್ಲಿ ಕಾಮನ್ ಯೂನಿವರ್ಸಿಟಿ ಆಕ್ಟ್ ಬಂತು. ಈ ಆಕ್ಟ್ ಬಂದಮೇಲೆ ಚುನಾವಣೆ ಮಾಡಲಿಕ್ಕೆ

ಒಂದು ವರ್ಷ ಎರಡು ವರ್ಷ ಆಯಿತು. ನಂತರ ಚುನಾವಣೆ ಆಯಿತು, ೧೯೭೬ರಲ್ಲಿ ಈ ಯೂನಿವರ್ಸಿಟಿ ಸೆನೆಟ್‌ಗೆ ಬರತಕ್ಕವರೆಲ್ಲಾ ಬಾರದೆ ಹೋದುದಕ್ಕೆ ಪೂರ್ತಿಯಾಗಿ ಕಾನಸ್ಟಿಟ್ಯೂಟ್ ಆಗಲಿಲ್ಲ. ಚುನಾಯಿತ ಸದಸ್ಯರು ಎರಡು ವರ್ಷಗಳವರೆಗೆ ಸುಮ್ಮನೆ ಕೂಡಬೇಕಾಯಿತು. ಚುನಾವಣೆ ಆಗಬೇಕೂಂತ ವಿದ್ಯಾರ್ಥಿ ಪ್ರತಿನಿಧಿಗಳು ಒತ್ತಾಯ ಮಾಡಿದಮೇಲೆ ಪುನಃ ಹೋದ ಅಧಿವೇಶನದಲ್ಲಿ ಮಂತ್ರಿಗಳು ಒಪ್ಪಿಕೊಂಡರು, ಇದಕ್ಕೆ ತಿದ್ದುಪಡಿ ತಂದು ಚುನಾವಣೆ ಮಾಡುತ್ತೇವೆಂದು ಒಪ್ಪಿಕೊಂಡು ೮ ತಿಂಗಳು ಆಯ್ತು, ೮ ತಿಂಗಳು ಆದಮೇಲೂ ವಿದ್ಯಾರ್ಥಿ ಪ್ರತಿನಿಧಿಗಳ ಚುನಾವಣೆ ನಡೆಯಲಿಲ್ಲ. ಕರ್ನಾಟಕ ಯೂನಿವರ್ಸಿಟಿ ಬಗ್ಗೆ ಹೇಳುವುದಾದರೆ, ಸೆನೆಟ್ ಹಾಗೂ ಸಿಂಡಿಕೇಟ್‌ಗೆ ಚುನಾವಣೆ ನಿಂತುಹೋಗಿವೆ. ಶ್ರೀಮಾನ್ ಯಾಹ್ಯಾರವರು ಮಂತ್ರಿಗಳಾಗಿದ್ದಾಗ ಒಂದು ಆರ್ಡಿನೆನ್ಸ್ ತಂದು ಚುನಾವಣೆ ಮಾಡಿ ಒಂದು ತಿಂಗಳಲ್ಲಿ ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು ಇದುವರೆವಿಗೂ ಕ್ರಮ ತೆಗೆದು ಕೊಳ್ಳಲಿಲ್ಲ. ನಾನು ಸರ್ಕಾರಕ್ಕೆ ಕೇಳುವುದೇನೆಂದರೆ ವಿದ್ಯಾರ್ಥಿ ಪ್ರತಿನಿಧಿಗಳಿಂದ ಚುನಾವಣೆ ಎಷ್ಟು ದಿವಸದಲ್ಲಿ ಮಾಡುತ್ತೀರಿ, ಸಿಂಡಿಕೇಟ್ ಚುನಾವಣೆ ಎಷ್ಟು ದಿವಸದಲ್ಲಿ ಮಾಡುತ್ತೀರಿ ?

† ಶ್ರೀ ಎಂ. ಶ್ರೀನಿವಾಸ್ (ಶ್ರೀರಂಗಪಟ್ಟಣ).— ಸಭಾಧ್ಯಕ್ಷರೆ, ಕರ್ನಾಟಕ ಸ್ಟೇಟ್ ಯೂನಿವರ್ಸಿಟಿ ಆಕ್ಟ್‌ಗೆ ಏನು ತಿದ್ದುಪಡಿ ತಂದಿದ್ದಾರೆ. ಇದು ಕೆಲವು ಹೊಸದಾಗಿ ಬಂದಿರತಕ್ಕ ಸದಸ್ಯರನ್ನು ಅಲ್ಲಿಗೆ ಸದಸ್ಯರನ್ನಾಗಿ ಮಾಡುವುದಕೋಸ್ಕರ ತಂದಿದ್ದಾರೆಯೇ ಹೊರತು ಇದರಲ್ಲಿ ಬೇರೆ ಏನೂ ಇಲ್ಲ. ಸರ್ಕಾರದವರು ಮಾನ್ಯ ವಿರೋಧಪಕ್ಷದ ನಾಯಕರು ಏನು ಕೆಲವು ವಿಚಾರಗಳನ್ನು ಏನು ಹೇಳಿದ್ದಾರೆ ಅದರ ಕಡೆ ಪೆಚ್ಚಿನ ಗಮನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ೧೯೭೫ರ ಜನವರಿ ತಿಂಗಳಲ್ಲಿ ಚುನಾವಣೆ ನಡೆದವು. ಕಾಮನ್ ಯುನಿವರ್ಸಿಟಿ ಆಕ್ಟ್ ತರುವುದರ ಬಗ್ಗೆ ಶಾಸನಸಭೆಯಲ್ಲಿ ಮಸೂದೆ ಮಂಡನೆ ಆಗಿ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಹೋಯಿತು. ಆಗ್ಗೆ ಸೆನೆಟ್ ಎಲೆಕ್ಷನ್ ನಿಂತು ಹೋಯಿತು. ಕೆಲವಂಗೆ ಸೆನೆಟ್ ಎಲೆಕ್ಷನ್ ಬಗ್ಗೆ ವಿಚಾರ ಗೊತ್ತಿಲ್ಲದೇ ಇರಬಹುದು, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಚುನಾವಣೆ ಪಾರ್ಲಿಮೆಂಟ್ ಎಲೆಕ್ಷನ್ ರೀತಿ ದೊಡ್ಡದಾದ ಏರಿಯಾವಲ್ಲಿ ನಡೆಯುತ್ತೆ. ಇವತ್ತು ವಿದ್ಯಾರ್ಥಿಗಳು ಅಲ್ಲಿ ನಿಂತು ಗೆದ್ದು ಬರುತ್ತಾರೆ. ಕೇವಲ ಎರಡು ತಿಂಗಳಲ್ಲಿ ಆರ್ಡಿನೆನ್ಸ್ ಮೂಲಕ ಕಾಯಿದೆಯನ್ನು ಸೆಪ್ಟಂಬರ್‌ನಲ್ಲಿ ಜಾರಿ ಮಾಡಿದ್ದಾರೆ.

ಇವತ್ತು ಈ ವಿಶ್ವವಿದ್ಯಾನಿಲಯಗಳ ಎಂದರೆ ಆಡಳಿತ ಸ್ಥಗಿತವಾಗಿದೆ ಎಂದರೆ ನೀವು ಈ ಯೂನಿವರ್ಸಿಟಿ ಆಕ್ಟ್‌ನ್ನು ಕೂಲಂಕುಷವಾಗಿ ಚರ್ಚಿಸದೆ ಸುಗ್ರೀವಾಜ್ಞೆ ಮೂಲಕ ತಂದ್ದಿದೇ ಕಾರಣ. ಈಗ್ಗೆ 2½ ವರ್ಷಗಳಿಂದ ನೀವು ಏನೊಂದು ತಿದ್ದುಪಡಿಗಳನ್ನು ತರುತ್ತಿದ್ದೀರಿ ಇದು ಬಹುಶಃ ೪ ಅಥವಾ ೫ನೇದು ಇರಬಹುದು. ಈ ಕರ್ನಾಟಕ ಯೂನಿವರ್ಸಿಟಿ ಆಕ್ಟ್ ಪಾಸಾದವರು ಶ್ರೀಮಾನ್ ಬದರೀನಾರಾಯಣ್‌ರವರು, ಅವನ್ನು ಮುಂದುವರಿಸಿದವರು ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ಆದನ್ನು ಜಾರಿಗೆ ತಂದವರು ಶ್ರೀಮಾನ್ ಯಾಹ್ಯಾರವರು, ಇವತ್ತು ಈ ಸಮಸ್ಯೆಗಳನ್ನು ಎದುರಿಸುತ್ತಿರುವವರು ಶ್ರೀಮಾನ್ ಸುಬ್ಬಯ್ಯಶೆಟ್ಟರು. ತಾವು ಏನೊಂದು ಆಸಕ್ತಿಯಿಂದ ಈ ಸುಗ್ರೀವಾಜ್ಞೆ ಹೊರಡಿಸಿದಿರಿ ಅದರ ಬಗ್ಗೆ ಪೆಚ್ಚಿಗೆ ಗಮನಕೊಟ್ಟಿಲ್ಲ. I can say that they showed an indifferent attitude towards this particluar legislation. ಇನ್ನು ೬ ತಿಂಗಳಲ್ಲಿ ರೆಸ್ಪಾನ್ಸಿಬಲ್ ಬಾಡೀಸ್‌ನ್ನು ನಾವು ಕಾನ್‌ಸ್ಟಿಟ್ಯೂಟ್ ಮಾಡುತ್ತೇವೆ ಎಂದು ಹೇಳಿದ್ದಿರಿ. ಆದರೆ ಇದುವರೆಗೂ ಸೆನೆಟ್ ಆಗಲಿ ಸಿಂಡಿಕೇಟ್ ಆಗಲಿ ಅಕೆಡೆಮಿಕ್ ಕೌನ್ಸಿಲ್ ಆಗಲಿ ಯಾವುದನ್ನೂ ಕೂಡ ತಾವು ಪೂರ್ತಿಯಾಗಿ ಕಾನ್‌ಸ್ಟಿಟ್ಯೂಟ್ ಮಾಡಿಲ್ಲ. ಇದಕ್ಕೆ ಕಾರಣ ಎಂದರೆ ಈ ಆಕ್ಟ್‌ನಲ್ಲಿರುವ ತೊಡಕುಗಳು. I learn that there have been strong observations by the University Grants Commission regarding this Act. ಆದ್ದರಿಂದ ಈ ಆಕ್ಟ್‌ನಲ್ಲಿರತಕ್ಕ ತೊಡಕುಗಳನ್ನು ತೆಗೆದುಹಾಕುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು. ಅದು ಬಿಟ್ಟು ತಾವು ಈ ರೀತಿ ತಿದ್ದುಪಡಿಗಳನ್ನು ತರುವುದರಿಂದ ಯೂನಿವರ್ಸಿಟಿ ಆಡ್ಮಿನಿಸ್ಟ್ರೇಷನ್‌ಗೆ ತೊಂದರೆ ಯಾಗುತ್ತದೆ.

೧–೦೦ ಪಿ. ಎಂ.

ಇನ್ನೊಂದು ನೀವು ಮಾಡಿರಬಹುದಾದ ಒಂದು ದೊಡ್ಡ ತಪ್ಪು ಎಂದರೆ ೩ ಯೂನಿವರ್ಸಿಟಿಗಳನ್ನೂ ಸೇರಿಸಿ ಒಂದು ''ಕಾಮನ್ ಯೂನಿವರ್ಸಿಟಿ ಆಕ್ಟ್'' ಎಂದು ಮಾಡಿದ್ದೀರಿ, ಆದರೆ ಇವತ್ತು ಎಲ್ಲ

ವಿಶ ವಿದ್ಯಾನಿಲಯಗಳೂ ಸಹ ಅವರವರದ್ದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿವೆ. ಈ ೩ ವಿಶ್ವವಿದ್ಯಾನಿಲಯಗಳಿಗೂ ಏಕರೂಪತೆ ತರವುದಕ್ಕಾಗುವುದಿಲ್ಲ. ಇವತ್ತು ಮೈಸೂರು ಯೂನಿವರ್ಸಿಟಿಗೆ ೯ ಜಿಲ್ಲೆಗಳು ಸೇರುತ್ತವೆ, ಬೆಂಗಳೂರು ಯುನಿವರ್ಸಿಟಿಗೆ ೩ ಜಿಲ್ಲೆಗಳು ಸೇರುತ್ತವೆ ಇನ್ನು ಮಿಕ್ಕ ಜಿಲ್ಲೆಗಳು ಕರ್ನಾಟಕ ಯೂನಿವರ್ಸಿಟಿಗೆ ಸೇರುತ್ತವೆ. ತಾವು ಸ್ಟೂಡೆಂಟ್ಸ್ ಎಲೆಕ್ಷನ್ ಮಾಡುವಾಗ ೩ ಜನರನ್ನು ಅಂಡರ್ ಗ್ಯಾಜುಯೇಟ್ಸ್‌ನಿಂದಲೂ ಇಬ್ಬರನ್ನು ಪೋಸ್ಟ್ ಗ್ಯಾಜುಯೇಟ್ಸ್‌ನಿಂದಲೂ ತೆಗೆದುಕೊಂಡು ಭರ್ತಿ ಮಾಡಬೇಕೆಂದು ಒರಿಜನಲ್ ಆಕ್ಟ್‌ನಲ್ಲಿ ಹೇಳಿದ್ದೀರಿ. ಹಿಂದೆ ತುರ್ತು ಪರಿಸ್ಥಿತಿ ಇದ್ದುದರಿಂದ ವಿದ್ಯಾರ್ಥಿಗಳನ್ನು ನಾಮಿನೇಷನ್ ಮೂಲಕ ಭರ್ತಿ ಮಾಡಬೇಕೆಂದು ಬಂದು ತಿದ್ದುಪಡಿ ತಂದಿರಿ. ಆಗ ವಿದ್ಯಾರ್ಥಿಗಳು ಚುನಾವಣೆ ಮೂಲಕವೇ ಭರ್ತಿ ಮಾಡಬೇಕೆಂದು ಗಲಾಟೆ ಮಾಡಿದ್ದರಿಂದ ಸರ್ಕಾರ ಆದಕ್ಕೆ ಮಣಿದು ಚುನಾವಣೆ ಮೂಲಕವೆ ಭರ್ತಿಮಾಡುವುದಾಗಿ ಹೊರಟಿದ್ದೀರಿ. ಇವತ್ತು ವಿದ್ಯಾರ್ಥಿಗಳ ಸಂಖ್ಯೆ ದೊಡ್ಡದು. ಆದ್ದರಿಂದ ನಾನು ಹೇಳುವುದೇನೆಂದರೆ, ವಿದ್ಯಾರ್ಥಿಗಳಿಗೆ ಹೆಚ್ಚು ತೊಡಕಾಗದ ರೀತಿಯಲ್ಲಿ ಬಹಳ ಎಚ್ಚರಿಕೆಯಿಂದ ನೀವು ಈ ಚುನಾವಣೆಯನ್ನು ಮಾಡಬೇಕು. ಇಲ್ಲದಿದ್ದರೆ ನಾಳೆ ವಿದ್ಯಾರ್ಥಿಗಳಿಂದ ಪ್ರತಿಭಟನೆ ಬರುತ್ತದೆ. ನೀವು ಮಾಡಿರುವ ಇನ್ನೊಂದು ನ್ಯೂನತೆ ಏನೆಂದರೆ ೧೯೭೫ನೇ ಸೆಪ್ಟಂಬರ್ ತಿಂಗಳಿಂದ ಇವತ್ತಿನವರೆಗೂ ೩ ವಿಶ್ವವಿದ್ಯಾನಿಲಯಗಳಲ್ಲೂ ಯಾವ ಯಾವ ಪೋಸ್ಟ್‌ಗಳು ಖಾಲಿ ಇದ್ದುವೋ ಅವುಗಳನ್ನು ಭರ್ತಿಮಾಡಿಲ್ಲ. ಇದರಿಂದ ಎಷ್ಟು ತೊಂದರೆಯಾಗಿದೆ ಎಂಬುದನ್ನೂ ತಾವು ಯೋಚನೆ ಮಾಡಬೇಕು.

ಇನ್ನೊಂದು ವಿಚಾರ ಏನೆಂದರೆ ಸೆನೆಟ್‌ನಲ್ಲಿ high officials like D.P.I., Director of Technical Education, Director of Health Services ಹೀಗೆ ಸುಮಾರು ೭—೮ ಜನರಿದ್ದಾರೆ. ಈ ದೊಡ್ಡ ಆಧಿಕಾರಿಗಳು ೩ ವಿಶ್ವವಿದ್ಯಾನಿಲಯಗಳಿಗೂ ಸೆನೆಟ್ ಸದಸ್ಯರಾಗಿರುತ್ತಾರೆ, ಆದರಲ್ಲಿ ಕೆಲವರು ಸಿಂಡಿಕೇಟ್‌ಗೂ ಸದಸ್ಯರಾಗಿರುತ್ತಾರೆ. ಈ ಆಧಿಕಾರಿಗಳ ಕೆಲಸದ ಜೊತೆಗೆ ೩ ವಿಶ್ವವಿದ್ಯಾನಿಲಯಗಳ ಕೆಲಸವನ್ನೂ ಅಂದರೆ ಸೆನೆಟ್ ಮತ್ತು ಸಿಂಡಿಕೇಟ್‌ನ ಕೆಲಸಗಳನ್ನೂ ಮಾಡುವುದಕ್ಕೆ ಆಗುತ್ತದೆಯೇಎಂಬುದನ್ನು ಯೋಚನೆ ಮಾಡಬೇಕು. ನಾನು ೩ ವರ್ಷಗಳಿಂದಲೂ ಮೈಸೂರು ವಿಶ್ವವಿದ್ಯಾನಿಲಯದ ಸೆನೇಟ್ ಮೆಂಬರ್ ಆಗಿ ಕೆಲಸಮಾಡುತ್ತಿದ್ದರೂ ಇದುವರೆಗೂ ಎಷ್ಟೋ ಸದಸ್ಯರನು ನಾನು ಸರಿಯಾಗಿ ನೋಡಿಯೇ ಇಲ್ಲ. We have given autonomy to the Universities. ನನಗೆ ಇದರಲ್ಲಿ ಸಂಶಯ ಇದೆ. ಇವತ್ತು ವೈಸ್ ಚಾನ್ಸಲರ್‌ನ್ನು ತಾವು ನಾಮಿನೇಟ್ ಮಾಡಿದ್ದೀರಿ. Why should the Government have its own nominee in the Selection Board ? ಇದನ್ನೆಲ್ಲಾ ನೋಡಿದರೆ ಈ ವಿಶ್ವವಿದ್ಯಾನಿಲಯಗಳಿಗೆ ಸ್ವಾಯತ್ತತೆ ಇದೆಯೇ ಎನ್ನುವ ಸಂಶಯ ಬರುತ್ತದೆ.

ಮತ್ತೊಂದು ವಿಷಯ ಹೇಳಬೇಕೆಂದರೆ ಸರ್ಕಾರ ವಿಶ್ವವಿದ್ಯಾನಿಲಯದ ರೆಕ್‌ಮಂಡೇಷನ್ ವಿರುದ್ಧ ಕೆಲವು ಕಾಲೇಜುಗಳಿಗೆ ಅಫಿಲಿಯೇಷನ್ ಕೊಟ್ಟಿರತಕ್ಕ ನಿದರ್ಶನಗಳಿವೆ. ಇದು ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಇಲ್ಲ ಎಂಬುದಕ್ಕೆ ನಿದರ್ಶನವಾಗುತ್ತದೆ. ಕೊಠಾರಿ ಕಮಿಷನ್‌ನವರು The destiny of this Nation is being established in her Class rooms ಎಂದು ಒಂದು ಮಾತು ಹೇಳಿದ್ದಾರೆ. ಇವತ್ತು ಆ ಒಂದು ದೃಷ್ಟಿ ಇಟ್ಟುಕೊಂಡು ವಿಶ್ವವಿದ್ಯಾನಿಲಯಗಳಲ್ಲಿ ಸ್ಟೈಕ್, ಇನ್‌ಡಿಸಿಪ್ಲೀನ್ ಏನು ನಡೆಯುತ್ತಿದೆ, ಇದನ್ನೆಲ್ಲಾ ಸರಿಪಡಿಸಬೇಕಾದರೆ ಕಾನೂನು ಸರಿಪಡಿಸಬೇಕು. ಇಲ್ಲದಿದ್ದರೆ ನಮ್ಮ ಭಾರತದ ಭವಿಷ್ಯದ ಬಗ್ಗೆ ಒಂದು ಆತಂಕ ಬರುತ್ತದೆ. This Act is full of defects. ..... ಈ ಸೆನೆಟ್ ಮತ್ತು ಸಿಂಡಿಕೇಟ್ ಬಗ್ಗೆ ಅನೇಕ ರಿಟ್ ಪಿಟಿಷನ್ಸ್, ಕರ್ನಾಟಕ ಹೈಕೋರ್ಟ್‌ನಲ್ಲಿವೆ. ಇದರಿಂದಾಗಿ ಸಿಂಡಿಕೇಟ್ ಮತ್ತು ಸೆನೆಟ್ ಚುನಾವಣೆಗಳಿಗೆ ಸ್ಟೇ ಕೊಟ್ಟಿದ್ದಾರೆ.

ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ ಈ ರೀತಿ ಹಾಚಪಾಚ ತಿದ್ದುಪಡಿಗಳನ್ನು ತರದೆ ಒಂದೇ ಸಾರಿ ಸಮಗ್ರವಾದ ತಿದ್ದುಪಡಿಗಳನ್ನು ತನ್ನಿ, ಇಲ್ಲವೇ ಈ ತಿದ್ದುಪಡಿಗಳನ್ನೆಲ್ಲಾ ತೆಗೆದುಹಾಕಿ ತಮ್ಮದೇ ಆದ ಪರಿಷ್ಕೃತವಾದ ತಿದ್ದುಪಡಿಗಳನ್ನು ತರಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI K. PUTTASWAMY.—Even now the Government does not seem to have made up its mind about the mode of elections—whether it is direct or otherwise.

† ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸಭಾಪತಿಗಳೇ, ಈ ಕರ್ನಾಟಕ ಸ್ಟೇಟ್ ಯೂನಿವರ್ಸಿಟೀಸ್ ಅಮೆಂಡ್‌ಮೆಂಟ್ ಬಿಲ್ ಬಗ್ಗೆ ಮಾತನಾಡುವುದಕ್ಕೆ ಮುಂದೆ ಮಾನ್ಯ ವಿದ್ಯಾ ಸಚಿವರನ್ನು ಒಂದೆರಡು ಕ್ಲಾರಿಫಿಕೇಷನ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಪೊನ್ನೆತಾನೆ ಪ್ರಾಸ್ತಾಪ ಮಾಡುತ್ತಾ ಆರ್ಡಿನೆನ್ಸ್ ತರಬೇಕಾದರೆ ಅಂಥಾ ಒಂದು ಪರಿಸ್ಥಿತಿ ಏನಿತ್ತು ಎಂದು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಅದನ್ನು ಹೇಳುವುದಿಲ್ಲ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ಈ ಆರ್ಡಿನೆನ್ಸ್ ಹೊರಡಿಸಬೇಕಾದ ಅವಶ್ಯಕತೆ ಏನಿತ್ತು ಎಂದು ? ಅದನ್ನು ಹೇಳುವುದಕ್ಕೆ ಅಡ್ಡಿ ಏನಿದೆ ? ಅವರು ಅದನ್ನು ಮುಚ್ಚಿಡುವಾಗ ನಮಗೆ ಇದರ ಬಗ್ಗೆ ಸಂಶಯ ಬರುತ್ತದೆ.

ಇನ್ನು ಎರಡನೆಯದು ಇದರಲ್ಲಿ ೪ ಅಂಶಗಳಮೇಲೆ ಅಮೆಂಡ್‌ಮೆಂಟ್ ತಂದಿದ್ದಾರೆ. ಪ್ರತಿಯೊಂದು ವಿಷಯಕ್ಕೂ ನಾಲ್ಕು ಸೆಂಟೆನ್ಸ್ ಹೇಳಬೇಕಾದರೆ ಇದರ ಹಿನ್ನೆಲೆ ಏನೆಂಬುದನ್ನು ಹೇಳಬೇಕು. ಅಮೆಂಡ್‌ಮೆಂಟ್ ೨ ಮತ್ತು ೩ ಇದರ ಬಗ್ಗೆ ನಮಗೆ ಕ್ಲಾರಿಫಿಕೇಷನ್ ಹೇಳಿದರೆ ಹೆಚ್ಚಿಗೆ ಮಾತನಾಡುವ ಅವಶ್ಯಕತೆ ಇರುವುದಿಲ್ಲ. ಈಗ ಇದರಲ್ಲಿ ಮೊದಲನೆಯ ಅಮೆಂಡ್‌ಮೆಂಟ್‌ನಲ್ಲಿ ಹೇಳಿದ್ದಾರೆ ಕನ್ನಡ ಕಲ್ಚರ್ ಮತ್ತು ಟ್ರಾನ್ಸ್‌ಲೇಷನ್ ಇವೆರಡನ್ನೂ ಬೈಫರೆಕೇಟ್ ಮಾಡಿದ್ದಾರೆ. ಹಾಗಾದರೆ ಟ್ರಾನ್ಸ್‌ಲೇಷನ್ ಡಿಪಾರ್ಟ್‌ಮೆಂಟ್ ಏನಾಯಿತು ? ಅದನ್ನು ಡಿಲೀಟ್ ಮಾಡಿದ್ದಾರೆಯೇ ? ಇದರಲ್ಲಿ ಸಂದೇಹ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಇದರಲ್ಲಿ ನನ್ನ ಮನಸ್ಸಿಗೆ ಸಂಶಯ ಉಂಟಾಗಿದೆ. ಆದ್ದರಿಂದ ಇದನ್ನು ಕ್ಲಾರಿಫೈ ಮಾಡಬೇಕು. It is also proposed to recognise an institution situated outside the university area for the purposes of section 54 of the Act. ಎಂದು ಹೇಳಿದ್ದಾರೆ. ಔಟ್‌ಸೈಡ್ ದಿ ಯೂನಿವರ್ಸಿಟಿ ಎಂದರೆ ಏನು ಎಂಬುದನ್ನು ಮಾನ್ಯ ಮಂತ್ರಿಗಳು ಡಿಫೈನ್ ಮಾಡಬೇಕು. ಈಗ ನಮ್ಮಲ್ಲಿ ೩ ವಿಶ್ವವಿದ್ಯಾನಿಲಯಗಳು ಇವೆ. ಅವು ಯಾವುವೆಂದರೆ ಒಂದು ಬೆಂಗಳೂರು ವಿಶ್ವವಿದ್ಯಾನಿಲಯ, ಮೈಸೂರುವಿಶ್ವವಿದ್ಯಾನಿಲಯ, ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ. ಇದರಲ್ಲಿ ಯಾವ ಯಾವಯೂನಿವರ್ಸಿಟಿಗೆ ಯಾವ ಯಾವಜಿಲ್ಲೆಗಳು ಸೇರಿವೆ ಎಂಬುದನ್ನು, ಅವುಗಳ ಜ್ಯೂರಿಡಿಕ್ಷನ್ ಏನು ಎಂಬುದನ್ನು ಆಕ್ಟಿನಲ್ಲಿ ಡಿಫೈನ್ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಔಟ್‌ಸೈಡ್ ಯೂನಿವರ್ಸಿಟಿಏರಿಯಾ ಎಂದು ಇರತಕ್ಕಂಥಾ ಇನ್‌ಸ್ಟಿಟ್ಯೂಷನ್ ಅನ್ನು ರೆಕಗ್ನೈಜ್ ಮಾಡಬೇಕು ಎಂದರೆ ಔಟ್‌ಸೈಡ್ ದಿ ಯೂನಿವರ್ಸಿಟಿ ಏರಿಯಾ ಎಂದರೆ ಯಾವುದು ? ಔಟ್‌ಸೈಡ್ ದಿ ಯೂನಿವರ್ಸಿಟಿ ಏರಿಯಾ ಎಂದರೆ ಜಿಯಾಗ್ರಫಿಕಲ್ ಡಿವಿಜನ್ ಎಂದು ಆಯಿತು. ಹಾಗಾದರೆ ಬೆಂಗಳೂರು ಯೂನಿವರ್ಸಿಟಿ ಇನ್‌ಸ್ಟಿಟೂಟ್ಸ್ ರೆಕಗ್ನೈಜ್ ಮಾಡಬೇಕು ಎಂದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಏರಿಯಾ ಬೆಂಗಳೂರು ಜಿಲ್ಲೆ, ತುಮಕೂರು ಮತ್ತು ಕೋಲಾರ ಈ ಜಿಲ್ಲೆಗಳಲ್ಲಿರತಕ್ಕ ಇನ್‌ಸ್ಟಿಟ್ಯೂಷನ್‌ಗಳನ್ನು ರೆಕಗ್ನೈಜ್ ಮಾಡಬಹುದು. ಆದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಏರಿಯಾದಲ್ಲಿ ಇಲ್ಲದೇ ಇರತಕ್ಕ ಎಂದರೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರತಕ್ಕ ಒಂದು ಇನ್‌ಸ್ಟಿಟ್ಯೂಟ್ ಅನ್ನು ರೆಕಗ್ನೈಜ್ ಮಾಡತಕ್ಕ ಅಧಿಕಾರ ಆವರಿಗೆ ಇದೆಯೇ ? ಆದಕಾರಣ ಈ ಔಟ್‌ಸೈಡ್‌ದಿ ಯೂನಿವರ್ಸಿಟಿ ಏರಿಯಾ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ವಲ್ಪ ಕ್ಯಾರಿಫೈ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ನಾಲ್ಕನೆಯ ಅಮೆಂಡ್‌ಮೆಂಟ್ ಬಗ್ಗೆ ಹೇಳುವುದಾದರೆ ಕನ್ನಡ ಮತ್ತು ಕಲ್ಚರಲ್ ಡಿಪಾರ್ಟ್‌ಮೆಂಟ್ ಆನ್ನು ಇದರಲ್ಲಿ ಸೇರಿಸುವುದಕ್ಕೆ ನಮ್ಮ ಯಾವ ಅಭ್ಯಂತರವೂ ಇಲ್ಲ. ಇದರಲ್ಲಿ ಮುಖ್ಯವಾಗಿ ಇರತಕ್ಕದ್ದು ಸೆನೆಟ್ಟಿಗೆ ೫ ಜನ ವಿದ್ಯಾರ್ಥಿಗಳನ್ನೂ ಯೂನಿವರ್ಸಿಟಿಯಿಂದ ಎಂದರೆ ಇಬ್ಬರನ್ನು ಪೋಸ್ಟ್ ಗ್ರಾಜುಯೇಟ್ ಕೋರ್ಸ್ ವಿದ್ಯಾರ್ಥಿಗಳಿಂದಲೂ, ೩ ಜನ ವಿದ್ಯಾರ್ಥಿಗಳನ್ನು ಆಂಡರ್‌ಗ್ರಾಜುಯೇಟ್ ಕೋರ್ಸ್ ವಿದ್ಯಾರ್ಥಿಗಳಿಂದಲೂ ಚುನಾಯಿಸಬೇಕು ಎಂದು ಇದರಲ್ಲಿ ಹೇಳಿದ್ದಾರೆ. ಆದರೆ ಮೋಡ್ ಆಫ್ ಎಲೆಕ್ಷನ್ ಯಾವುದು ಎಂಬುದನ್ನು ಸ್ಪಷ್ಟವಾಗಿ ಇದರಲ್ಲಿ ಹೇಳಿಲ್ಲ. "Such representative shall be elected by such election, direct or otherwise in such election, direct or otherwise in such manner as may be prescribed by the statute" ಎಂದು ಹೇಳಿದ್ದಾರೆ. ಸ್ಟಾಟ್ಯೂಟ್ ಮಾಡತಕ್ಕ ಅಧಿಕಾರ ಸಿಂಡಿಕೇಟ್‌ಗೆ ಇದೆ. ಅವರಿಗೆ ಎಲೆಕ್ಷನ್ ಇರಬೇಕು ಎಂದು ಆಕ್ಟಿನಲ್ಲಿ ಇದೆ. ಅವರು ಅದಕ್ಕೆ ಒಪ್ಪಿಕೊಂಡಿದ್ದಾರೆ. ಆದರ ಡೀಟೈಲ್ಸ್ ಏನನ್ನು ಎಂದರೆ ಮೋಡ್ ಆಫ್ ಎಲೆಕ್ಷನ್ ನಿಶ್ಚಯ ಮಾಡತಕ್ಕದ್ದನ್ನು ಸ್ಟಾಟ್ಯೂಟ್ ಮೂಲಕ ಸಂಬಂಧಪಟ್ಟ ಸೆನೆಟ್‌ಗಳು ಮಾಡಿಕೊಳ್ಳಬಹುದು ಎಂದು ಇದೆ. ಸರ್ಕಾರದವರ ಉದ್ದೇಶ ಸ್ಪಷ್ಟವಾಗಿದೆ. ಆದರೆ

ಇದರ ಬಗ್ಗೆ ಸ್ವಲ್ಪ ಆಳವಾಗಿ ವಿಚಾರ ಮಾಡಬೇಕು. ಈ ಅಮೆಂಡ್ ತರುವುದಕ್ಕೆ ಮುಂಚೆ ಅದೃಷ್ಟ ವಶಾತ್ ಅಥವಾ ದುರದೃಷ್ಟವಶಾತ್ ಈ ಆಕ್ಟ್ ಪಾಸಾದಾಗ ನಾನು ಜೈಲಿನಲ್ಲಿ ಇದ್ದೆ, ಇದು ಪಾಸಾದಾಗ ಇದರ ಮೇಲೆ ಅಷ್ಟು ಮುಕ್ತವಾಗಿ ಚರ್ಚೆಯಾಗಲಿಲ್ಲ. ಸಮಗ್ರವಾಗಿ ಹೇಳುವುದಕ್ಕೆ ಆಗ ಅವ ಕಾಶ ಇರಲಿಲ್ಲ. ೧೯೭೬ರಲ್ಲಿ ಇದು ಪಾಸಾಗಿ ಅಂಗೀಕಾರವಾಯಿತು. ಈಗ ಈ ತಿದ್ದುಪಡಿಯನ್ನು ತಂದಿದ್ದಾರೆ. ಇವೊತ್ತು ಈ ವಿಚಾರಕ್ಕೆ ಸಂಬಂಧಪಟ್ಟಹಾಗೆ ಬೇರೆಬೇರೆ ದೇಶಗಳಲ್ಲಿರತಕ್ಕ ವಿಶ್ವವಿದ್ಯಾ ನಿಲಯಗಳಲ್ಲಿರತಕ್ಕ ಸ್ಥಿತಿಯನ್ನು ನಾವು ಅಧ್ಯಯನ ಮಾಡಿದರೆ, ಕರ್ನಾಟಕದಲ್ಲಿ ಇರತಕ್ಕದ್ದನ್ನು ಅಧ್ಯ ಯನ ಮಾಡಿದರೆ ವಿದ್ಯಾರ್ಥಿಗಳನ್ನು ಚುನಾವಣೆ ಮಾಡಿ ಅದರ ಮುಖಾಂತರ ವಿದ್ಯಾರ್ಥಿಗಳ ಪ್ರತಿನಿಧಿ ಗಳನ್ನು ಸಿಂಡಿಕೇಟ್ ಅರಿಸತಕ್ಕದ್ದನ್ನು ಯಾವ ಉದ್ದೇಶದಿಂದ ಇದನ್ನು ಇಂಟ್ರಡ್ಯೂಸ್ ಮಾಡಿದರು, ಎಷ್ಟರಮಟ್ಟಿಗೆ ಇದು ಸಫಲವಾಗುತ್ತದೆ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಇವೊತ್ತು ವಿದ್ಯಾರ್ಥಿಗಳ ಪ್ರಪಂಚದಲ್ಲಿರತಕ್ಕ ವಾತಾವರಣವನ್ನು ನೋಡಿದರೆ ನಿಜವಾದ ಪ್ರತಿನಿಧಿಗಳು ಆರಿಸಿ ಬರುತ್ತಾರೆಯೇ ಎಂಬುದನ್ನು ವಿಚಾರ ಮಾಡಬೇಕು. ಇವೊತ್ತು ಕಾಲೇಜುಗಳಲ್ಲಿ ಅದೃಷ್ಟವೋ ಅಥವಾ ದುರದೃಷ್ಟವೋ ವಿದ್ಯಾರ್ಥಿಗಳಲ್ಲಿ ಒಂದು ಹಿಡಿತದಲ್ಲಿ ಇಟ್ಟುಕೊಳ್ಳು ವುದಕ್ಕೆ ಅನೇಕ ರಾಜಕೀಯ ಪಕ್ಷ ಅನೇಕ ಗುಂಪುಗಳು ಪ್ರಯತ್ನ ಮಾಡುತ್ತಿವೆ. ಇವರು ಕಾಲೇಜು ಬಿಟ್ಟು ಹೋಗುವುದಿಲ್ಲ. ಇವರನ್ನು ಮೇಂಟೈನ್ ಮಾಡತಕ್ಕ ಗ್ರೂಪ್‌ಗಳಿವೆ, ಬ್ರಿಗೇಡ್‌ಗಳಿವೆ, ಪಕ್ಷಗಳಿವೆ. ಇವರು ಶಾಶ್ವತವಾದ ವಿದ್ಯಾರ್ಥಿಗಳು. ನೀವು ಚುನಾವಣೆ ಮಾಡುತ್ತೀರಿ, ಚುನಾವಣೆ ಮಾಡಿದಾಗ ಇವರೇ ಆಟ ಆಡುವುದು. ನಿಜವಾದ ವಿದ್ಯಾರ್ಥಿ ಪ್ರತಿನಿಧಿಗಳೇನಿದ್ದಾರೆ ಅವರು ಆರಿಸಿ ಬರಲಿಕ್ಕೆ ಅವಕಾಶವಿಲ್ಲ. ನನಗೆ ವಿಶ್ವವಿದ್ಯಾನಿಲಯದ ಸ್ಥಿತಿಗತಿಗಳು ಗೊತ್ತಿದೆ. ಈ ಒಂದು ಗೂಂಡಾಗಿರಿ ಗುಂಪು ಯಾವುದು ಇದೆ ಇದು ಸುಲಭವಾಗಿ ಚುನಾವಣೆಯಲ್ಲಿ ಗೆದ್ದು ಬರುತ್ತದೆ. ಇಂತಪ ಗುಂಪುಗಳನ್ನು ಹಣಕೊಟ್ಟು ಮೇಂಟೈನ್ ಮಾಡುತ್ತಾರೆ. ಹೊರಗಡೆ ಇರತಕ್ಕ ಶಕ್ತಿಗಳು ಅಪಾರವಾದ ಹಣವನ್ನು ಈ ಗುಂಪುಗಳಿಗೆ ಸುರಿಯುತ್ತಾರೆ. ನಾನು ಅವರು ಇಂಥವರು ಎಂದು ಆಪಾದನೆ ಮಾಡು ವುದಿಲ್ಲ. ಈ ರೀತಿ ಹಣವನ್ನು ಸುರಿದು ಪ್ರಚೋದನೆ ಮಾಡಿ ಸುಲಭವಾಗಿ ತಮ್ಮ ಒಂದು ರಾಜಕೀಯ ಅವಶ್ಯಕತೆಗೆ ತಕ್ಕಂತೆ ಅವರನ್ನು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಆ ದೃಷ್ಟಿಯಿಂದ ವಿದ್ಯಾರ್ಥಿಗಳ ಮೇಲೆ ಹಿಡಿತ ಇಟ್ಟುಕೊಳ್ಳತಕ್ಕಂಥಾದ್ದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಬೆಂಗಳೂರು ವಿಶ್ವ ವಿದ್ಯಾನಿಲಯದಲ್ಲಿ ಮೊನ್ನೆ ನಡೆದ ಘಟನೆಗಳ ಬಗ್ಗೆ ನಾನು ಹೆಚ್ಚಾಗಿ ಪ್ರಸ್ತಾಪ ಮಾಡುವುದಿಲ್ಲ. ಹೊರ ಗಡೆ ಇರತಕ್ಕ ಶಕ್ತಿಗಳು ಗೂಂಡಾಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು. ಬೆಂಗಳೂರು ವಿಶ್ವ ವಿದ್ಯಾನಿಲಯದ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿ ವರದಿಬಂದಮೇಲೆ ಯಾವ ಯಾವ ಶಕ್ತಿಗಳು ಇದ್ದು ಕೆಲಸ ಮಾಡಿಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ವಿದ್ಯಾರ್ಥಿಗಳನ್ನು ಸೆನೆಟ್‌ಗೆ ಅಸೋಸಿಯೇಟ್ ಮಾಡಬೇಕು, ಪ್ಯಾಪರ್ ಥಾನಲೈಸ್ ಮಾಡಬೇಕು ಎನ್ನುವ ಉದ್ದೇಶ ಸಫಲವಾಗಬೇಕು. ವಿಶ್ವವಿದ್ಯಾ ನಿಲಯಗಳಲ್ಲಿ ಲಾ ಅಂಡ್ ಆರ್ಡರ್ ಸಿಚುಯೇಷನ್ ಮಾಡುವುದು ಅವಶ್ಯವಿದೆ. ದುಷ್ಟ ಪ್ರವೃತ್ತಿ ಇರುವುದಕ್ಕೆ ಅವಕಾಶ ಇರಬಾರದು. ಚುನಾವಣೆಗಳು ಯೋಗ್ಯರೀತಿಯಲ್ಲಿ ಆಗುತ್ತದೆಯೇ ಇಲ್ಲವೇ ಎನ್ನುವುದರ ಬಗ್ಗೆ ತಾವು ವಿಚಾರ ಮಾಡಬೇಕು. ಈ ಆಕ್ಟ್‌ಗೆ ಮೇಜರ್ ಅಮೆಂಡ್‌ಮೆಂಟ್ ಏನಾದರೂ ಮಾಡುವುದಾದರೆ ಮಾಡಿ. ಯೂನಿವರ್ಸಿಟಿಯಲ್ಲಿ ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ. ವಿರಿಯಾ ಬಗ್ಗೆ ಹೇಳುವುದಾದರೆ, ೩ ಡಿಫಿಕ್ಲ್ಟಿಗಳಿವೆ. ಲಕ್ಷಾವಧಿ ವಿದ್ಯಾರ್ಥಿಗಳಿದ್ದಾರೆ, ಎಲೆಕ್ಷನ್ಸ್ ನಡೆಸಬೇಕಾಗಿದೆ ಯೂನಿವರ್ಸಿಟಿ ಎಲೆಕ್ಷನ್ ನೆನಸಿಕೊಂಡರೆ ಭಯವಾಗುತ್ತದೆ. ಪಾರ್ಲಿಮೆಂಟ್ ಎಲೆಕ್ಷನ್ ಸುಗುಮವಾಗಿ ನಡೆಯುತ್ತದೆ, ಆದರೆ ಯೂನಿವರ್ಸಿಟಿ ಎಲೆಕ್ಷನ್ ನಡೆಸುವುದು ಮಹಾ ಪ್ರಯಾಸದ ಕೆಲಸ. ಈ ಚುನಾವಣೆ ಅಷ್ಟು ಭಯಾನಕವಾಗಿ ನಡೆಯುತ್ತದೆ. ಎಷ್ಟೊಂದು ಹಣ ವೆಚ್ಚವಾಗುತ್ತದೆ. ರಾಜ್ಯದಲ್ಲಿ ಸ್ಟೂಡೆಂಟ್ ಎಲೆಕ್ಷನ್ ನಡೆಸಬೇಕು ಎಂದರೆ, you just imagine the depth & dimension of the problem that you are going to face. ಕೊಠಾರಿ ಕಮಿಷನ್ ಕೂಡ ಇದರ ಬಗ್ಗೆ ಸಲಹೆಗಳನ್ನು ಮಾಡಿದೆ. ಅದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ವರ್ಷಕ್ಕೊಂದು ಸಲ ಚುನಾವಣೆ ನಡೆಯಬೇಕು, ವರ್ಷಕ್ಕೊಂದು ಸಲ ಪ್ರತಿನಿಧಿಗಳನ್ನು ಕಳಿಸಬೇಕು. ಇದು ಕರ್ನಾಟಕ ರಾಜ್ಯದ ಪ್ರತಿಯೊಂದು ಕಾಲೇಜಿನಲ್ಲೂ ನಡೆಯಬೇಕು. ಬೆಂಗಳೂರು ಯೂನಿವರ್ಸಿಟಿಯಲ್ಲಿ ಸ್ಟೂಡೆಂಟ್ಸ್ ಕೌನ್ಸಿಲ್ ಇದೆ. ಇಲ್ಲಿನ ವಿದ್ಯಾರ್ಥಿಗಳಲ್ಲಿ ಹಣಾಹಣಿ ಜಗಳ ನಡೆಯುತ್ತದೆ. ಒಂದು ವರ್ಷದಲ್ಲಿ ಪ್ರತಿ ಕಾಲೇಜಿನಲ್ಲೂ ಎರಡು ಮೇಜರ್ ಎಲೆಕ್ಷನ್ಸ್ ನಡೆಯಬೇಕು. ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡು ವುದು ಬಿಟ್ಟು ಚುನಾವಣೆಯಲ್ಲಿ ಭಾಗವಹಿಸಬೇಕಾಗುತ್ತದೆ. ಪ್ರತಿಯೊಂದು ಕಾಲೇಜಿನ ಚುನಾವಣಾ

ಕಣದಲ್ಲಿ ಹೋರಾಡತಕ್ಕದ್ದು ರಾಜಕೀಯ ಗುಂಪುಗಳಾಗಬಹುದು, ಜಾತೀಯ ಗುಂಪುಗಳಾಗಬಹುದು ಇವರಲ್ಲಿ ಹೊಡೆದಾಟ ನಡೆಯುತ್ತದೆ. ಚುನಾವಣೆಗಳ ಮೂಲಕ ತರತಕ್ಕಂಥ ನಿರ್ಧಾರನ್ನು ಏನು ತೆಗೆದುಕೊಂಡಿದ್ದೀರಿ ಮೂಲಭೂತವಾಗಿ ಇದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇದನ್ನು ಆತುರವಾಗಿ ಮಾಡುವುದು ಬೇಕಾಗಿಲ್ಲ. In this connection I want to suggest one alternative. ಇದು ಬಹಳ ಗಂಭೀರವಾದ ವಿಚಾರ. ಇಡೀ ರಾಜ್ಯದ ಪ್ರತಿಯೊಂದು ಕಾಲೇಜಿನಲ್ಲಿ ಶಾಂತಿ ಸ್ಥಿತಿಗೆ ಭಂಗತರತಕ್ಕ ನಿರ್ಧಾರ ಇದು. ವಿಶ್ವವಿದ್ಯಾನಿಲಯಗಳಲ್ಲಿ ವರ್ಷದಲ್ಲಿ ಎರಡು ಬಾರಿ ಚುನಾವಣೆಯಾಗುತ್ತದೆ. ಆದಕ್ಕೋಸ್ಕರ ಸರ್ಕಾರ ಇದರ ಬಗ್ಗೆ ಶಿಕ್ಷಣ ತಜ್ಞರನ್ನು, ಶಿಕ್ಷಕರನ್ನು ಮತ್ತು ಬೇರೆ ಬೇರೆ ತಜ್ಞರನ್ನು ಕರೆಸಿ ವಿಚಾರ ಮಾಡಿ, ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ರಾಜ್ಯದ ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯಗಳ ಶಾಂತಿ ದೃಷ್ಟಿಯಿಂದ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಕೊಠಾರಿ ಕಮಿಷನ್‌ನವರು ಇನ್ನೊಂದು ಸಲಹೆಯನ್ನು ಮಾಡಿದ್ದಾರೆ. ಇದರಲ್ಲಿ ಸೆನೆಟ್ ರಚನೆ ಇದೆ. ಇದರಲ್ಲಿ ೫ ಪ್ರತಿನಿಧಿಗಳಿಗೆ ಚುನಾವಣೆಯಾಗಬೇಕು ಎಂದು ಇದೆ, ಬೇರೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ನಾಮಕರಣದ ಮೂಲಕ ತರುತ್ತಾರೆ. ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್‌ನವರನ್ನು ತರುವುದಕ್ಕೆ ಛಾನ್ಸಲರ್‌ಗೆ ಅವಕಾಶವಿದೆ. On the recommendation of the Expert Committee, the Governor is going to make the nomination here. ಇದನ್ನು ಸುಲಭವಾಗಿ ಮಾಡುತ್ತಾರೆ. ಆದುದರಿಂದ ತಾವು ಎಲೆಕ್ಷನನ್ನು ಡಿಲೀಟ್‌ಮಾಡಿ. ನಾನು ಮೂಲತಃ ವಿದ್ಯಾರ್ಥಿಗಳು ಸೆನೆಟ್‌ನಲ್ಲಿರಬೇಕು ಎನ್ನುವ ತತ್ವಕ್ಕೆ ಬದ್ದ.

SRI K. PUTTASWAMY.—They will not allow to make the nomination.

SRI MALLUR ANANDA RAO.—If you avoid election, then give due representation to the real students. ಗೂಂಡಾ ಸ್ಟೂಡೆಂಟ್ಸ್‌ಗೆ ಅಲ್ಲ.

ಒಬ್ಬ ಸದಸ್ಯರು.—ವಿಶ್ವವಿದ್ಯಾನಿಲಯದಲ್ಲಿ ಗೂಂಡಾ ವಿದ್ಯಾರ್ಥಿಗಳು ಯಾರು ಇರುತ್ತಾರೆ. ಗೂಂಡಾ ಎನ್ನುವ ಶಬ್ದವನ್ನು ಮಾನ್ಯ ಸದಸ್ಯರು ವಾಪಸ್ ತೆಗೆದುಕೊಳ್ಳಬೇಕು. ವಾಪಸ್ ತೆಗೆದು ಕೊಳ್ಳದೇಹೋದರೆ ವಿದ್ಯಾರ್ಥಿವೃಂದಕ್ಕೆ ಮಾನ್ಯ ಮಳ್ಳೂರು ಆನಂದರಾಯರು ಅಪಮಾನ ಮಾಡುತ್ತಾರೆ ಎಂದು ಅನ್ನಿಸುತ್ತದೆ. ಆದುದರಿಂದ ವಿದ್ಯಾರ್ಥಿವೃಂದಕ್ಕೆ ಅಪಮಾನವಾಗದಂತೆ ವಿದ್ಯಾರ್ಥಿಗಳ ಹಕ್ಕು ಬಾಧ್ಯತೆಯನ್ನು ಸರಿಯಾಗಿ ಕಾಯಬೇಕು ಎಂದು ಹೇಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ನನ್ನ ದೃಷ್ಟಿ ಎರಡು ಇದೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರಾದ ಮಳ್ಳೂರು ಆನಂದರಾಯರು ಈ ವಿಶ್ವವಿದ್ಯಾ ನಿಲಯದ ಕಾಯಿದೆ ಈ ಸದನದಲ್ಲಿ ಪಾಸಾದಂಥ ಕಾಲದಲ್ಲಿ ಬುದ್ಧಿ ಜೀವಿಗಳು ಅಂದಕಾರದಲ್ಲಿದ್ದರು ಎಂದು ಹೇಳಿದರು. ಅದರ ಅರ್ಥ ಏನಾಯಿತು ಎಂದರೆ ಆಗ ಸದನದಲ್ಲಿದ್ದಂಥ ಸದಸ್ಯರು ಬುದ್ಧಿಜೀವಿ ಗಳಲ್ಲ ಎಂದಾಯಿತು. ಬುದ್ಧಿ ಜೀವಿಗಳು ಇಲ್ಲದೇ ಇದ್ದಂಥ ಕಾಲದಲ್ಲಿ ಪಾಸ್‌ಮಾಡಿದ್ದಾರೆ ಎನ್ನುತಕ್ಕಂಥ ರೀತಿಯಲ್ಲಿ ಕಲ್ಪನೆ ಮಾಡಿ ಅಪಮಾನ ಮಾಡುವ ರೀತಿಯಲ್ಲಿ ಹೇಳಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ನಾನು ಹೇಳುವುದಿಷ್ಟೆ. ಆಗ ಬುದ್ಧಿಜೀವಿಗಳು ಇರಲಿಲ್ಲ ಎಂದು ಹೇಳಲಿಲ್ಲ, ಇದರ ಬಗ್ಗೆ ಮುಕ್ತಮನಸ್ಸಿನಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಲಿಕ್ಕೆ ಅವಕಾಶವಿರಲಿಲ್ಲ ಎಂದು ಹೇಳಿದೆ. ಮಾನ್ಯ ಕೃಷ್ಣಪ್ಪನವರಿಗೆ ಸ್ವತಂತ್ರವಾಗಿ ಅವರ ಅಭಿಪ್ರಾಯವನ್ನು ವ್ಯಕ್ತಮಾಡುವುದಕ್ಕೆ ಆಗ ಅವಕಾಶವಿರಲಿಲ್ಲ. ಸೆನೆಟ್‌ನಲ್ಲಿ ವಿದ್ಯಾರ್ಥಿಗಳು ಇರಬೇಕು, ಅವರ ಅಗತ್ಯ ವಿದೆಯೆಂದು ಕೊಠಾರಿ ಕಮಿಷನ್ ವರದಿಯಲ್ಲಿದೆ. ಆ ಒಂದು ದೃಷ್ಟಿಯನ್ನು ಬಿಟ್ಟು ಬಿಟ್ಟು ಬೇರೆ ದೃಷ್ಟಿಯಿಂದ ಮಾಡುವುದು ಏಕೆ. ನನ್ನ ಅಭಿಪ್ರಾಯ ಇಷ್ಟೆ. ಕಾಲೇಜಿನಲ್ಲಿ ಒಳ್ಳೆಯ ಸ್ಪೋರ್ಟ್ಸ್, ಸ್ಟೂಡೆಂಟ್ಸ್, ಬ್ಯಾಂಕ್ ಹೋಲ್ಡರ್ಸ್ ಯಾರಿದ್ದಾರೆ ಅಂತಹ ೨೦-೨೫ ಜನರ ಪೆಸರುಗಳನ್ನು ಎಕ್ಸ್ ಪರ್ಟ್ ಕಮಿಟಿ ಕಳಿಸಿ ಗವರ್ನರ್ ಆರಿಸುವಂತೆ ಮಾಡುವುದು ಒಂದು ವಿಧಾನ. ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟಿಗೆ ಪ್ರಾತಿನಿಧ್ಯ ಕೊಡಬೇಕೆಂದು ಈ ಬಿಲ್ಲನ್ನು ತಂದಿದ್ದಾರೆ. ಆದರೆ ಇನ್‌ಡೈರೆಕ್ಟಾಗಿ ಎಲೆಕ್ಷನ್ ಮಾಡಿ ಅದರ ಪದಾಧಿಕಾರಿಗಳಿಗೆ ಅವರ ಪ್ರತಿನಿಧಿಗಳನ್ನು ಆರಿಸಲಿಕ್ಕೆ ಸಾಧ್ಯವಿದ್ದರೆ ವಿಚಾರ ಮಾಡಿ. ೧೦ ನಿಮಿಷದಲ್ಲಿ ಎಲ್ಲ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್‌ಡೈರೆಕ್ಟಾಗಿ

ಎಲೆಕ್ಷನ್ ಮಾಡಿ ಯೋಗ್ಯ ವ್ಯಕ್ತಿಗಳನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಆಯ್ಕೆ ಮಾಡಿ ಕಳುಹಿಸ ಬೇಕೆಂದು ಆಕ್ಟ್‌ನಲ್ಲಿ ನಮೂದಿಸಿದ್ದೀರಿ. ಆದರೆ ಇದಕ್ಕೊಸ್ಕರ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. That is my demand. ಕೊಠಾರಿ ಎಜುಕೇಷನ್ ಕಮಿಷನ್ನಿನ ವರದಿ ಎಲ್ಲವನ್ನೂ ತೆಗೆದುಕೊಳ್ಳಿ.

1-30 P.M.

ಅಧ್ಯಕ್ಷರು.—ಡಿಮ್ಯಾಂಡ್ ಎಂಬುದಾಗಿ ಹೇಳಬೇಡಿ. "That is my sincere suggestion"...ಎಂಬುದಾಗಿ ಹೇಳಿ.

ಶ್ರೀ ಮಳ್ಳೂರು ಆನಂದರಾವ್.—ಈ ಯೂನಿವರ್ಸಿಟಿಯ ಬಗ್ಗೆ ಈಗ ತಂದಿರುವ ಬಿಲ್ಲನ್ನು ತಕ್ಷಣಕ್ಕೆ ನಾವು ಇದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಇದರ ಬಗ್ಗೆ ಮತ್ತೊಮ್ಮೆ ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

†ಶ್ರೀ ಬಿ. ವಿ. ಕಕ್ಕಿಲಾಯ (ವಿಠ್ಠಲ್).—ತಾವು ಇವತ್ತು ಏನೊಂದು ಬಿಲ್‌ನ್ನು ತಂದಿದ್ದೀರಿ ಆದರ ಬಗ್ಗೆ ಹೋದ ಸಲ ಈ ಸದನದಲ್ಲಿ ಬಹಳ ದೀರ್ಘವಾದ ಚರ್ಚೆಯಾಗಿದೆ ಎಂದು ನನಗನ್ನಿಸುತ್ತದೆ. ಮೈಸೂರು ಯೂನಿವರ್ಸಿಟಿಯ ಸಿಂಡಿಕೇಟ್ ಮತ್ತು ಅಕೆಡೆಮಿಕ್ ಬಾಡೀಸನ್ನು ಕಾನ್ಸಿಟ್ಯೂಟ್ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಕೊನೆಗೆ ಯಾವ ರೀತಿಯಿಂದಲಾದರೂ ಅಕೆಡೆಮಿಕ್ ಬಾಡೀಸನ್ನು ಕಾನ್ಸಿಟ್ಯೂಟ್ ಮಾಡಬೇಕೆಂಬ ಉದ್ದೇಶದಿಂದ ಕೆಲವು ತಿದ್ದುಪಡಿಗಳನ್ನು ಮಾಡಿ ಆರ್ಡಿನೆನ್ಸ್ ತೆಗೆದುಕೊಂಡು ಬಂದು ಪ್ರತಿನಿಧಿಗಳನ್ನು ಚುನಾವಣೆ ಮಾಡುವಾಗ ಇಲ್ಲಿಂದ ೩ ಜನ ಆರಿಸಿ ಹೋಗಿದ್ದೆವು. ಆದರೆ ಆ ರೀತಿ ನಾವು ಆರಿಸಿ ಹೋದ ಮೇಲೆ ಸಭೆಯನ್ನೇ ನಡೆಸಲಿಲ್ಲ. ಕೊನೆಗೆ ಒಂದು ಸಭೆಗೆ ನಾವು ಹೋಗಿದ್ದೆವು. ಆ ಮೇಲೆ ಸರ್ಕಾರವೇ ವಿಸರ್ಜನೆಯಾಯಿತು. ಆದ್ದರಿಂದ ಮೈಸೂರು ಯೂನಿವರ್ಸಿಟಿಯ ಸಿಂಡಿಕೇಟ್‌ಗೆ ಈ ಮನೆಯ ಸದಸ್ಯರ ಪ್ರತಿನಿಧಿಗಳು ಈಗ ಇಲ್ಲ. ಯೂನಿವರ್ಸಿಟಿಯ ವಿದ್ಯಾರ್ಥಿಗಳ ಬಗ್ಗೆ ಶ್ರೀಮಾನ್ ಮಳ್ಳೂರು ಆನಂದರಾವ್‌ರವರು ಕೆಲವು ವಿಚಾರಗಳನ್ನು ಹೇಳಿದರು. ಆಗ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ನಾಮಿನೇಟ್ ಮಾಡುವಾಗ ಸರ್ಕಾರದ ಸಲಹೆಗಳನ್ನು ತೆಗೆದುಕೊಂಡು ರಾಜ್ಯಪಾಲರು ಆವಾಗ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ನಾಮಿನೇಟ್ ಮಾಡಿದರು. ಆಗ ಅಲ್ಲಿಯ ವಿದ್ಯಾರ್ಥಿಗಳು ಮತ ಪ್ರದರ್ಶನ ನಡೆಸಿ ಸಭೆ ನಡೆಸಬಾರದು. ನಮ್ಮ ಪ್ರತಿನಿಧಿಗಳು ಚುನಾಯಿತರಾದ ಮೇಲೆ, ನಮ್ಮ ಪ್ರತಿನಿಧಿಗಳಾಗಿ ಯಾರನ್ನು ಚುನಾಯಿಸಿ ಕಳುಹಿಸುತ್ತೇವೆಯೋ ಅವರು ಬಂದ ಮೇಲೆ ಈ ಸಿಂಡಿಕೇಟ್ ಸಭೆ ನಡೆಯಬೇಕು. ಅಲ್ಲಿಯವರೆಗೂ ನಡೆಸಬಾರದು ಎಂಬುದಾಗಿ ಗೊಂದಲ ಮಾಡಿದರು. ಇದನ್ನು ನಾವು ಅರ್ಥಮಾಡಿಕೊಂಡರೆ ಮಾನ್ಯ ಶ್ರೀ ಮಳ್ಳೂರು ಆನಂದರಾವ್‌ರವರು ಹೇಳಿದ್ದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ನಾವು ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಸಿಂಡಿಕೇಟ್‌ಗೆ ಕಳುಹಿಸತಕ್ಕಂಥ ಪೂರ್ಣ ಜವಾಬ್ದಾರಿಯನ್ನು ಸರ್ಕಾರದ ಮೇಲೆ ಹೊರಿಸಿದ್ದೇವೆಂದು ನನಗನ್ನಿಸುತ್ತದೆ. ಇದರಿಂದಲೇ ಅಲ್ಲಿ ಗೊಂದಲವಾಗಬಹುದು, ಅಲ್ಲಿ ಶಾಂತ ವಾತಾವರಣ ನೆಲೆಸದಿರಬಹುದು ಎಂಬುದಾಗಿ ಊಹಿಸಿ ಶ್ರೀಮಾನ್ ಮಳ್ಳೂರು ಆನಂದರಾವ್‌ರವರು ಆ ರೀತಿ ಹೇಳಿದರು. ನಾವು ಯಾರನ್ನು ನಾಮಿನೇಟ್ ಮಾಡಿದರೂ ಅದು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಖಂಡಿತವಾಗಿ ಆತೃಪ್ತಿಯನ್ನುಂಟುಮಾಡುತ್ತದೆ.

ಶ್ರೀ ಮಳ್ಳೂರು ಆನಂದರಾವ್.—ನಾಮಿನೇಟ್ ಮಾಡಬೇಕು ಎನ್ನುವುದಕ್ಕೆ ನನ್ನ ವಿರೋಧವಿಲ್ಲ. ಇದಕ್ಕೆ ನಾವೆಲ್ಲರೂ ಕಲೆತು ವಿಚಾರ ಮಾಡಿದರೆ ಇದಕ್ಕೆ ಒಂದು ಮಾರ್ಗವನ್ನು ಹುಡುಕಬಹುದೆಂದು ನಾನು ಭಾವಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ನಾವು ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ನಾಮಿನೇಟ್ ಮಾಡುವುದಕ್ಕಿಂತಲೂ ಸುಲಭ ರೀತಿಯಲ್ಲಿ ಚುನಾವಣೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಅವರು ಕೂಡ ಹೆಚ್ಚು ಜವಾಬ್ದಾರಿಯುತವಾಗಿ ಕೆಲಸ ಮಾಡುವುದಕ್ಕೆ ಹಾಗೂ ವಿಶ್ವವಿದ್ಯಾನಿಲಯದ ಪುಟ್ಟವಲ್ಲಿ ಶಾಂತಿ ವಾತಾವರಣ ನಿರ್ಮಾಣ ಮಾಡುವುದಕ್ಕೆ ಅವರ ಒಂದು ಹೆಚ್ಚಿನ ಜವಾಬ್ದಾರಿ ಇರುತ್ತದೆ. ನಾವು ಪ್ರಜಾಪ್ರಭುತ್ವದ ತತ್ವವನ್ನು ಪಾಲನೆ ಮಾಡಿಕೊಂಡು ಬಂದಿರುವವರು. ನಮ್ಮ ದೇಶದ ೩೦ ವರ್ಷಗಳ ಚರಿತ್ರೆಯಲ್ಲಿ ಪ್ರಜಾಪ್ರಭುತ್ವದ ತತ್ವವನ್ನು ಜಾರಿಗೆ ತರಬೇಕಾದರೆ ಬೇಕಾದಷ್ಟು

ಕಷ್ಟಗಳನ್ನು ಅನುಭವಿಸಿದ್ದೇವೆ. ಇದರ ಒಂದು ಭಾಗ ವಿದ್ಯಾರ್ಥಿಗಳೂ ಕೂಡ. ಸ್ವಲ್ಪ ಗೊಂದಲ ಬರುತ್ತದೆ. ಆದರೆ ಅದನ್ನೇ ಬೃಹದಾಕಾರವನ್ನಾಗಿ ಮಾಡುವುದಕ್ಕೆ ಬದಲಾಗಿ ವಿದ್ಯಾರ್ಥಿಗಳು ತಮ್ಮ ಪ್ರತಿನಿಧಿಗಳನ್ನು ಚುನಾವಣೆ ಮೂಲಕ ಆರಿಸಿ ಕಳುಹಿಸುವುದಕ್ಕೆ ಅವಕಾಶ ಮಾಡಿಕೊಟ್ಟು, ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಶಾಂತ ವಾತಾವರಣ ನಲೆಸುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ೫ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಚುನಾವಣೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಆದರೆ ಪ್ರತಿಯೊಂದು ವರ್ಗದಲ್ಲೂ ಅವರವರ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಕೆಲವರಿಗೆ ಇದರಲ್ಲಿ ಅವರ ಪ್ರಾತಿನಿಧ್ಯ ಇಲ್ಲ ಎಂಬ ಪ್ರಶ್ನೆ ಪುನಃ ಉದ್ಭವವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಯೋಚನೆ ಮಾಡಿ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೂ ಕೂಡ ಪ್ರಾತಿನಿಧ್ಯ ಸಿಕ್ಕುವ ಹಾಗೆ ಮಾಡಿದರೆ ಮಾತ್ರ ಈಗ ಇರತಕ್ಕಂಥ ಅತೃಪ್ತಿ ತಪ್ಪಿಸಬಹುದೆಂದು ನನಗಾದರೂ ಅನ್ನಿಸುತ್ತದೆ. ನಾನೂ ಕೂಡ ಇದರ ಬಗ್ಗೆ ಸಾಧ್ಯವಾದಷ್ಟು ಪ್ರಶ್ನೆಗಳನ್ನು ಕೇಳಿದ್ದೇನೆ. ಆದರೂ ಕೂಡ ಯೂನಿವರ್ಸಿಟಿಯ ಬಗ್ಗೆ ಯಾವ ಒಂದು ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದಾರೆಂಬುದು ನಮಗಂತೂ ಅರ್ಥವಾಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಾಲೇಜುಗಳು ಕೂಡ ಮೈಸೂರು ಯೂನಿವರ್ಸಿಟಿಯ ಅಧೀನಕ್ಕೆ ಒಳಪಡುತ್ತವೆ. ಆದರೆ ಮಣಿಪಾಲ್‌ನಲ್ಲಿರುವ ಕಸ್ತೂರ್‌ಬಾ ಮೆಡಿಕಲ್ ಕಾಲೇಜನ್ನು ಮಾತ್ರ ಹಿಂದೆ ಯಾವುದೋ ಒಂದು ಒತ್ತಡದಿಂದ ಅದನ್ನು ಕರ್ನಾಟಕ ಯೂನಿವರ್ಸಿಟಿಯ ಅಧೀನಕ್ಕೆ ಒಳಪಡಿಸಿದರು. ಇದರಿಂದ ಎಷ್ಟು ತೊಂದರೆಯಾಯಿತು ಎಂಬುದು ತಮಗೂ ಗೊತ್ತಿದೆ. ಮೈಸೂರು ಯೂನಿವರ್ಸಿಟಿ ಮತ್ತು ಕರ್ನಾಟಕ ಯೂನಿವರ್ಸಿಟಿಯ ಮಧ್ಯೆ ಬಹಳ ಮಟ್ಟಿಗೆ ಗೊಂದಲವಾಗಿವುದಕ್ಕೆ ಇದು ಕಾರಣವಾಯಿತು. ಆ ಮೇಲೆ ಬದಲಾವಣೆ ಮಾಡಿ ಇವತ್ತು ಕಸ್ತೂರ್‌ಬಾ ಮೆಡಿಕಲ್ ಕಾಲೇಜನ್ನೂ ಕೂಡ ಮೈಸೂರು ಯೂನಿವರ್ಸಿಟಿಯ ವಿಭಾಗಕ್ಕೆ ಸೇರಿಸಲಾಗಿದೆ. ಆದ್ದರಿಂದ ಒಂದು ಯೂನಿವರ್ಸಿಟಿಯ ಪ್ರದೇಶಕ್ಕೆ ಸೇರಿದಂತಹ ಯಾವುದೇ ಒಂದು ಸಂಸ್ಥೆಯನ್ನು ಇನ್ನೊಂದು ಯೂನಿವರ್ಸಿಟಿಯ ವಿಭಾಗಕ್ಕೆ ಸೇರಿಸುವುದು ರಾಜಕೀಯವಾಗುತ್ತದೆ. ಇದು ಅಷ್ಟು ಸೂಕ್ತವಾದುದಲ್ಲ. ಆದ್ದರಿಂದ ಒಂದು ಯೂನಿವರ್ಸಿಟಿಯ ಪ್ರದೇಶಕ್ಕೆ ಒಳಪಡತಕ್ಕಂಥ ಎಲ್ಲ ಸಂಸ್ಥೆಗಳ ಮೇಲೆ ಆಧಿಕಾರ ಆಯಾಯ ಯೂನಿವರ್ಸಿಟಿಯಿಂಪರಿಗಿರ ಬೇಕು. ಮತ್ತು ಅದರೊಳಗೆ ಇರತಕ್ಕಂಥ ಎಲ್ಲ ಸಂಸ್ಥೆಗಳು ಅವರ ಹದ್ದುಬಸ್ತಿನಲ್ಲಿರತಕ್ಕಂಥ ಶಕ್ತಿ ಅವರಿಗಿರಬೇಕು.

†ಶ್ರೀಮತಿ ಎಸ್. ಪ್ರಮೀಳ.—ಯೂನಿವರ್ಸಿಟಿ ಮಟ್ಟದಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವಾಗ ಚುನಾವಣೆ ಆಗಬೇಕು ಎಂಬುದನ್ನು ನಾನು ಅನುಮೋದಿಸುತ್ತೇನೆ. ಕಾರಣ ಇಷ್ಟೆ. ಸಿಂಡಿಕೇಟ್‌ಗೆ ಚುನಾಯಿತರಾಗಿ ಬಂದಿರತಕ್ಕಂಥ ಮಹಿಳಾ ಸದಸ್ಯರಲ್ಲಿ ನಾನು ಒಬ್ಬ ಸದಸ್ಯೆಯಾಗಿದ್ದೆನು. ಅಲ್ಲಿ ಇದುವರೆಗೂ ೨–೩ ಮೀಟಿಂಗ್‌ಗಳು ಮಾತ್ರ ನಡೆದಿವೆ. ಹಿಂದೆ ವಿದ್ಯಾರ್ಥಿಗಳನ್ನು ನಾಮನಿರ್ದೇಶನ ಮಾಡಿದ್ದಂತಹ ಸಂದರ್ಭದಲ್ಲಿ ಇಡೀ ಬೆಂಗಳೂರಿನಲ್ಲಿರುವ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳು ಕಾಲೇಜಿಗೆ ಅಟೆಂಡ್ ಮಾಡದೆ ಸಿಂಡಿಕೇಟ್ ಮೀಟಿಂಗನ್ನು ನಡೆಸಬಾರದು ಎಂಬುದಾಗಿ ಗೊಂದಲ ಮಾಡಿದ್ದನ್ನು ನಾವು ನೋಡಿದ್ದೇವೆ. ಪ್ರಜಾಪ್ರಭುತ್ವದಲ್ಲಿ ನಮಗೆ ಹೇಗೆ ನಂಬಿಕೆ ಇದೆಯೋ ಹಾಗೆಯೇ ವಿದ್ಯಾರ್ಥಿಗಳಿಗೂ ನಂಬಿಕೆ ಇದೆ. ಅವರೂ ಕೂಡ ನಾಳೆ ರಾಜಕೀಯದಲ್ಲಿ ಬರತಕ್ಕ ವ್ಯಕ್ತಿಗಳು. ಆದ್ದರಿಂದ ಚುನಾವಣೆ ಮಾಡುವುದರಲ್ಲಿ ಏನು ತಪ್ಪಿಲ್ಲ. ಆದರೆ ಚುನಾವಣೆಗಳು ಮುಕ್ತವಾಗಿ ಹೀಗೆ ನಡೆಯಬೇಕೆಂಬ ಬಗ್ಗೆ ವಿಚಾರ ಮಾಡಿ ಗೊಂದಲ ಆಗದಂತೆ ನೋಡಿಕೊಳ್ಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಅಮೇರಿಕಾದ ಒಂದು ಹಾಸ್ಟಲ್‌ನಲ್ಲಿ ಒಂದು ಸಮಸ್ಯೆ ಉಂಟಾದಾಗ ಒಬ್ಬರು ಯಾರೋ ದೊಡ್ಡ ಮನುಷ್ಯರು ಮಧ್ಯೆ ಪ್ರವೇಶಿಸಲು ಅಲ್ಲಿದ್ದ ವಿದ್ಯಾರ್ಥಿಗಳು ಈ ನಮ್ಮ ಹಾಸ್ಟಲ್ ವಿಷಯದಲ್ಲಿ ಮಧ್ಯೆ ಬರುವುದಕ್ಕೆ ಇವರಿಗೇನು ಹಕ್ಕಿದೆ ಎಂದು ಕೇಳಿದ್ದರಂತೆ; ಅಂದರೆ ತಮ್ಮ ಹಾಸ್ಟಲ್ ಹೇಗಿರಬೇಕೆಂಬುದನ್ನು ಅರಿತಿರುವಷ್ಟು ಅಲ್ಲಿನ ವಿದ್ಯಾರ್ಥಿಗಳು ಮುಂದುವರಿದಿದ್ದಾರೆ. ಅಂತೆಯೇ ನಮ್ಮ ಕರ್ನಾಟಕದಲ್ಲಿ ವಿದ್ಯಾಭ್ಯಾಸದ ಕ್ರಮ ಹೇಗಿರಬೇಕು, ಪಠ್ಯಪುಸ್ತಕಗಳು ಹೇಗಿರಬೇಕು, ಉಪಾಧ್ಯಾಯರು ಹೇಗಿರಬೇಕು, ಅವರ ಯೋಗ್ಯತೆ ಹೇಗಿರಬೇಕೆಂಬುದು ಇಲ್ಲಿನ ವಿದ್ಯಾರ್ಥಿಗಳಿಗೆ ಗೊತ್ತಿರುತ್ತದೆ. ಆದುದರಿಂದ ವಿದ್ಯಾರ್ಥಿಗಳಲ್ಲಿ ಚುನಾವಣೆಯಾಗಿ ಅವರ ಅಭ್ಯರ್ಥಿಗಳು ಆಯ್ಕೆಯಾಗುವಂತೆ ಆಗಬೇಕು. ಇನ್ನು ೫ ಜನ ಪ್ರತಿನಿಧಿಗಳಿರಬೇಕೆಂದು ಹೇಳಿದ್ದಾರೆ. ಹೆಣ್ಣು ಮಕ್ಕಳ ವಿಷಯಗಳು ಒಂದು ಕಡೆ ಮತ್ತು ಗಂಡು ಮಕ್ಕಳ ವಿಷಯಗಳು ಒಂದು ಕಡೆ

ನಡೆಯುವಂತಾಗಬೇಕು. ಏಕೆಂದರೆ ಅವರದ್ದೇ ಬೇರೆ ಮತ್ತು ಇವರದ್ದೇ ಬೇರೆ ಸಮಸ್ಯೆಗಳಿರುತ್ತವೆ. ಆದ್ದರಿಂದ ಮಾನ್ಯ ಮಾತ್ರಿಗಳು ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯ ಕೊಟ್ಟು ಅವರಿಗೂ ಕೂಡ ಚುನಾವಣೆ ಮಾಡಬೇಕು ಇಲ್ಲದಿದ್ದರೆ ಅವರಿಬ್ಬರ ಮಧ್ಯೆ ಯಾವ ಘರ್ಷಣೆಯೂ ಆಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಎ. ಮುತ್ತಿಕಟ್ಟಿ (ರೋಣ).—ಮಾನ್ಯ ಅಧ್ಯಕ್ಷರೇ, ನಾನು ಮೂರು ವರ್ಷಗಳ ಕಾಲ ಕರ್ನಾಟಕ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ನಾಯಕನಾಗಿ ಕೆಲಸ ಮಾಡಿದವನು. ಮಾನ್ಯ ಮಳ್ಳೂರು ಆನಂದರಾವ್‌ರವರು ಚುನಾವಣೆ ನಡೆಸುವುದರಿಂದ ಗೂಂಡಾವಸ್ಥೆಗೆ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕುತ್ತದೆಂದು ಹೇಳಿದರು. ಅದನ್ನು ನಾನು ಖಂಡಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ನಾನು ಕ್ರಿಯಾಲೋಪವನ್ನೆತ್ತುತ್ತೇನೆ. My Hon'ble Friend is distorting my speech. I never said that, I am against it. Why are you giving it colours?

ಶ್ರೀ ವಿ.ಎ. ಮುತ್ತಿಕಟ್ಟಿ.—ತಾವು ಅದನ್ನು ತಿರುಪು ಮುರುವು ಆಗಿ ಜಾಣತನದಿಂದ ಹೇಳಿದಿರಿ. (ಶ್ರೀ ಮಳ್ಳೂರು ಆನಂದರಾವ್‌ರವರು ಪುನ: ಮಾತನಾಡಲು ಅಧ್ಯಕ್ಷರು ಅವಕಾಶ ಕೊಡಲಿಲ್ಲ.)

ಶ್ರೀ ವಿ.ಎ. ಮುತ್ತಿಕಟ್ಟಿ.—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವಾಗ ಇಂಡೈರೆಕ್ಟ್‌ಆಗಿ ಹೇಳಿ, ಈಗ ನಾನು ಹೇಳಲಿಲ್ಲ ಎಂದು ಹೇಳುತ್ತಿದ್ದಾರೆ. ಅದು ಏನೇ ಇರಲಿ. ಆದರೆ ನಿಜವಾಗಿಯೂ ಚುನಾವಣೆಯಲ್ಲಿ ಒಳ್ಳೆಯ ವಿದ್ಯಾರ್ಥಿಗಳು ಆರಿಸಿಬರುತ್ತಾರೆ. ಇವತ್ತು ಪ್ರಜಾ ಪ್ರಭುತ್ವದ ಬಗ್ಗೆ ಬಹಳವಾಗಿ ಒತ್ತಿ ಒತ್ತಿ ಮಾತನಾಡತಕ್ಕ ಜನ ಪ್ರಜಾಪ್ರಭುತ್ವವನ್ನು ಮೊದಲಿನಿಂದ ಆಳವಡಿಸಿಕೊಂಡು ಬರಬೇಕೆಂದು ಹೇಳಿದಾಗ ಕೆಲವು ಮಂದಿ ವಿರೋಧಿಸಿದ್ದನ್ನು ನೋಡಿ ವಿಷಾದವೆನಿಸುತ್ತದೆ. ವಿಶ್ವವಿದ್ಯಾನಿಲಯದ ಆಗುಹೋಗುಗಳಲ್ಲಿ ಚುನಾಯಿತ ಪ್ರತಿನಿಧಿಗಳಾದ ವಿದ್ಯಾರ್ಥಿಗಳು ಪಾಲ್ಗೊಂಡರೆ ಹೆಚ್ಚಿನ ಜನಕ್ಕೆ ಅನುಕೂಲವಾಗುತ್ತದೆ. ಗೂಂಡಾಗಳನ್ನು ಹೆಚ್ಚಾಗಿ ವಿದ್ಯಾರ್ಥಿಗಳು ಆರಿಸಿಕೊಳ್ಳುವುದಿಲ್ಲ. ಬಹುಪಾಲು ವಿದ್ಯಾರ್ಥಿಗಳು ಒಳ್ಳೆಯವರಿರುತ್ತಾರೆ; ಒಳ್ಳೆಯ ವಿಚಾರ ಧಾರೆಯನ್ನಿಟ್ಟುಕೊಂಡಿರುವವರಿರುತ್ತಾರೆ. ಈ ರಾಷ್ಟ್ರದ ಬಗ್ಗೆ ಕಳಕಳಿ ಇರುವ ಯುವಕರೇ ಹೆಚ್ಚಾಗಿ ಇರುವುದರಿಂದ ಅವರ ಪ್ರತಿನಿಧಿಗಳಿಗೆ ಹೆಚ್ಚಾಗಿ ಅವಕಾಶ ಕೊಡಬೇಕೆಂದು ಹೇಳುತ್ತೇನೆ. ಚುನಾವಣೆಯಿಂದ ವಿದ್ಯಾರ್ಥಿಗಳನ್ನು ಸೆನೆಟ್ಟಿಗೆ ಆರಿಸಿ ತರುವುದನ್ನು ನಾನು ಪ್ರಭಲವಾಗಿ ಪ್ರತಿಪಾದಿಸುತ್ತೇನೆ. ಏಕೆಂದರೆ ಜಾಯಿಂಟ್ ಸೆಲೆಕ್ಟ್ ಕಮಿಟಿ ನಮ್ಮ ವಿಶ್ವವಿದ್ಯಾನಿಲಯಕ್ಕೆ ಬಂದ ಗ ನಾವು ಪ್ರತಿಪಾದಿಸಿ ಮಾಡಿದವು. ಮಾನ್ಯ ಮಹಿಳಾ ಸದಸ್ಯರು ಹೇಳಿದ ಪ್ರಕಾರ ವಿದ್ಯಾರ್ಥಿನಿಯವರಿಗೆ ಅವಕಾಶ ಕಲ್ಪಿಸಿ ಕೊಡಬೇಕು. ಜೊತೆಗೆ ವಿದ್ಯಾರ್ಥಿ ಪ್ರತಿನಿಧಿಗಳ ಪೈಕಿ ಹಿಂದುಳಿದ ವರ್ಗಕ್ಕೆ ಒಂದು ರಿಸರ್ವೇಷನ್ ಕೊಡ ಬೇಕು. ಚುನಾವಣೆಯಲ್ಲಿ ಬಹುಪಾಲು ಹಣ ಖರ್ಚು ಮಾಡತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಹಿಂದುಳಿದ ವರ್ಗಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ಆಗಿನ ಜಾಯಿಂಟ್ ಸಲೆಕ್ಟ್ ಕಮಿಟಿಯ ಮುಂದೆ ಪ್ರತಿ ಪಾದನೆ ಮಾಡಿದ್ದೆನು. ಇಂದು ಈ ಸದನದ ಮೂಲಕ ಹಿಂದುಳಿದ ವರ್ಗಕ್ಕೆ ಪ್ರಾತಿನಿಧ್ಯ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಇನ್ನುಳಿದ ವಿದ್ಯಾರ್ಥಿಗಳಲ್ಲಿ ಚುನಾವಣೆಯಾಗಿ ಚುನಾಯಿತ ಪ್ರತಿ ನಿಧಿಗಳು ಬರಬೇಕು. ಈಗಿರುವ ೫ ರ ಬದಲಿಗೆ ೧೦ ಮಂದಿ ವಿದ್ಯಾರ್ಥಿ ಪ್ರತಿನಿಧಿಗಳನ್ನು ತೆಗೆದುಕೊಳ್ಳ ಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ನಿವೇದಿಸಿಕೊಳ್ಳುತ್ತೇನೆ.

SRI B.B. SAYANAK.—How long shall we sit?

MR. SPEAKER.—I want to know it from the House.

SRI B.B. SAYANAK.—Let us take it up on Monday.

(೨-೩ ಮಂದಿ ಸದಸ್ಯರು ಮಾತನಾಡಬೇಕೆಂದುದ್ದೇಶಿಸಿ ಒಟ್ಟಿಗೆ ಎದ್ದುನಿಂತುಕೊಳ್ಳಲು ಮಾನ್ಯ ಅಧ್ಯಕ್ಷರು ಅವರನ್ನು ಕುಳಿತುಕೊಳ್ಳುವಂತೆ ಸೂಚಿಸಿದರು)

ಒಬ್ಬರು ಸದಸ್ಯರು.—ನೀವು ಹೊಸಬರಿಗೆ ಅವಕಾಶ ಕೊಡುವುದಿಲ್ಲ; ನಿಂತವರನ್ನು ಕೂರಿ ಎನ್ನುತ್ತೀರಿ.

MR. SPEAKER.—The hon'ble member cannot pass remarks like that. I have been watching proceeding closely. Hon'ble Member must know the feelings of the House. ನಾನು ಆ ಕಡೆಯವರಿಗೊಂದು ಸಾರಿ ಮತ್ತು ಈ ಕಡೆಯವರಿಗೊಂದು ಸಾರಿ ಅವಕಾಶ ಕೊಡುತ್ತೇನೆ.

† ಶ್ರೀ ಪಿ. ರಾಮುದೇವ್.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಷಯದಲ್ಲಿ ಹೇಳುವುದಾದರೆ ಈ ಸದನಕ್ಕೆ ಹೆಚ್ಚು ಪ್ರಾತಿನಿಧ್ಯ ಕೊಡುವಂತೆ ತಿದ್ದುಪಡಿಯನ್ನು ತರಬೇಕು. ೫ ಜನಕ್ಕಿಂತ ಹೆಚ್ಚು ಮಂದಿ ಅಲ್ಲಿ ಹೋಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆ? ಅಸೆಂಬ್ಲಿ ಮತ್ತು ಕೌನ್ಸಿಲ್‌ನಿಂದ ಹೋಗುವವರ ಸಂಖ್ಯೆಯನ್ನು ೧೦ ಮತ್ತು ೫ ಮಾಡುವುದು ಒಳ್ಳೆಯದು. ಆದರಲ್ಲಿ ಮಹಿಳೆಯರಿಗೂ ಮತ್ತು ಪರಿಜನರಿಗೂ ಅವಕಾಶ ಕೊಡಿ. ಇನ್ನು ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಬಗ್ಗೆ ಏನು ತಿದ್ದುಪಡಿ ತಂದಿದ್ದೀರಿ ಅದರ ಬಗ್ಗೆ ಯಾರೂ ಮಾತನಾಡಲಿಲ್ಲ. ಅದರ ಬಗ್ಗೆ ಸೆಕ್ಷನ್ ೪೯ ರಲ್ಲಿ ಪೇಳಿದ್ದೀರಿ. ಇದೊಂದು ತರಹ ರ‍್ಯಾಕೆಟ್ ನಡೆಯುತ್ತಿದೆ. ಏನೆಂದರೆ ಇಲ್ಲಿರತಕ್ಕವರು ಮತ್ತು ಬೇರೆ ವಿಶ್ವವಿದ್ಯಾನಿಲಯಗಳಿಂದ ಬರತಕ್ಕವರು, ನಾನು ಅಲ್ಲಿಗೆ ಬರುತ್ತೇನೆ, ನೀವು ಇಲ್ಲಿಗೆ ಬನ್ನಿ ಅಲ್ಲಿ ಎಲ್ಲ ನೋಡಿ ಸೆಲೆಕ್ಟ್ ಮಾಡೋಣ ಎಂದು ಮಾತನಾಡಿಕೊಳ್ಳುತ್ತಾರೆ. ಈ ಬೋರ್ಡಿನಲ್ಲಿ ಪ್ರೊಫೆಸರ್‌ಗಳು ಮತ್ತು ವೈಸ್ ಛಾನ್ಸಲರ್ ಇರುತ್ತಾರೆ. ಆದ್ದರಿಂದ ಈ ಸದನದಿಂದ ಹೋಗಿರತಕ್ಕವರು ಪ್ರತಿಯೊಂದು ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡುವಾಗಲೂ ಒಬ್ಬೊಬ್ಬರು ಇರಬೇಕೆಂದು ಮಾಡಿದರೆ ಸೂಕ್ತ, ಈ ಅಮೆಂಡ್‌ಮೆಂಟಿನ ಸ್ಟಾಟ್ಸೈಡ್ ಜ್ಯೂರಿಸ್‌ಡಿಕ್ಷನ್ ಬಹುಶಃ ಕಾನೂನಿಗೆ ವ್ಯತಿರಿಕ್ತವಾಗುತ್ತದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI B. SUBBAIAH SHETTY.—Mr. Speaker, Sir, there has been very interesting debate on this Amendment Bill and one point all of us noted is, there is no difference in this House regarding the amendment as such, but there have been certain suggestions that more amendments should be brought in its entirety, and it could be reviewed. That is what has been voiced by some of the hon'ble Members. I would request all the hon'ble Members to make a deeper study of this Act and to give suggestions and pass it on to me. If necessary, definitely, I will hold discussions with such Members who have studied it. Any Act is brought on a certain date. Afterwards, in the working of the Act, we may find certain lacunae and by the experience we gained by the working of the University or the working of the Act, definitely we may feel that certain amendments may be necessary. Some hon'ble Member has stated that this is the fourth amendment. May be. Whenever necessary, amendments may have to be brought because the experiences of the working may be such that amendments may be necessary. That is how the amendments are brought. It may even go much higher.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳ ಅಮೆಂಡ್‌ಮೆಂಟ್ಸ್ ಬರಬೇಕು. ಆದರೆ ಸ್ಟೂಡೆಂಟ್ಸ್ ರೆಪ್ರಸಂಟೇಟೀವ್ಸ್ ಬಗ್ಗೆ ಪ್ರಾತಿನಿಧ್ಯ ಕೊಡಬೇಕು ಕೊಡಬಾರದು ಎಂಬ ವಿಚಾರವಾಗಿ ಪದೇ ಪದೇ ಅಮೆಂಡ್‌ಮೆಂಟ್ ಬರುವುದು ಸರಿಯಲ್ಲ.

ಅದನ್ನು ಎರಡು ಮನೆಯಲ್ಲೂ ಒಮ್ಮತದಿಂದ ಪಾಸ್‌ಮಾಡಿದ್ದೀವೆ. ಮತ್ತೆ ಏಲೆಕ್ಟ್ ಮಾಡುವ ಅವಶ್ಯಕತೆ ಇರಲಿಲ್ಲ. ಮೊದಲು ನಾಮಿನೇಷನ್ ಮಾಡಿದಿರಿ. ನಂತರ ಚುನಾವಣೆ ಮಾಡಿದಿರಿ, ಮತ್ತೆ ನಾಮಿನೇಟ್ ಮಾಡಿದಿರಿ. ಈ ರೀತಿ ಪುನಃ ಪುನಃ ಬದಲಾಯಿಸುತ್ತಿದ್ದೀರಿ.

SRI B. SUBBAYYA SHETTY.—Perhapss the nominations or elections as the Leader of the Opposition has pointed out itself show the depth of the problem and also how, difficult it is to decide. Nobody has got vested interest whether this should be done or that should be done. But, this is not a subject matter of the amendment. The Hon'ble Members have even raised their please regarding election and said that it should be reviewed. From this we can say that this problem is such a delicate one and it requires lot of thinking. Hon'ble Members Sri Mallur Ananda Rho, Mr. B. V. Kakkilaya and Mr. Kodgi have all suggested certain things regarding this election. Of course, they have given certain thinking on this and by saying now at the present time we see that the election is only method that has been accepted by the Hon'ble Members and also by the other House. But that does not mean that we do not have the experience. The experience only prove at best whether this is a correct method which we have arrived or some other modification may be necessary. So, this is too early to say whether this method could work. And then. it has been said that there are vested interests who are interested with the students in exploting them and real respresentatives may not get representation and all those things have been said by the Hon'ble Members. I am not aggreeable to that point. Because, under the existing Act they can elect their representative and I hope the real students representive will get the proper respresentation. On this occassion, I would say that no one has got the interest to exploit the students either for political purpose or for any other matter. If there were to be such a situation, it is only by a vested interest. We should condemn such attitude of misleading students or exploiting them for some personal or for group interest.

Then, the next point which has been raised was regarding mode of election. Previously. there was no mode of election of such representative were there. Now, by this amendent we have made provision and suggested certain mode for electing the representatives to the Senate. We have given a sort of freedom to the University in this respect. As such certain Universities can hold direct elections and certain Universities may not find easy to hold direct elections. Hon'ble Member Sri Mallur Ananda Rao has suggested and said that some other method could be evolved. That is, why in order to overcome these difficulties, we have brought this amendment and the Universities have to frame their own statutes keeping inview the autonomous status of the universities. This is an enabling provision for the universities to hold election.

Next regarding section 54 which has been brought about a doubt has been raised whether we are encroaching upon territorial jurisdiction of another university. I think here we should try to understand the problem which has been referred to in this Act. It does not have the same cannotation as we have in some other Bill or Grant-in-Aid Code in this State. Recognition and affiliation are the subject matter of this section. Under this Act, affiliation means a thing for the affiliation purpose and the territorial jurisdiction has been marked beyond the territorial jurisdiction. No University has got any right to affiliation. Mr. Kakkilayya has mentioned about one institution in South Kanara District. I do not want to comment on it. Now, under this Act such a thing is not possible, because tertitorial jurisdiction is marked. So, under section 53 of this Act, affiliation is provided and affiliation could be done within the territorial jurisdiction. It is known as Unversity Area. So, within the University area only this affiliation could be done, Then, under Section 54 it is clearly stated, for instance institutionslike CFTRI does not come under the jurisdiction of the Bangalore University and certain students of the Bangalore University may like to do certain research in that institution. It is a speeialised institution. So, for the purpose of research in that institution and for getting a degree in this University, this University has to recognise that institution for that purpose. It is abundantly made clear in this Act itself and if you read Section 54 you can understand the position clearly. Section 54 says Any institution in the University Area other than a college which conducts research or specified studies, may be recognised by the Syndicate as a recognised institution for such purpose and in such manner and subject to such condition as may be prescribed by the Statutes". Therefore, it may not be only in Karnataka! it may be done even outside for such purposes and nothing more. There is no possibility of any clash as such. So, affiliation is different from recognition. Recognition is for certain purposes only and for that purpose this amendment has been brought. I hope I have clarified.

SRI MALLUR ANANDA RAO.—What is University area ? Even under Section 54 it is said that "any institution in the university area other than a college which conducts research....." area has not been defined.

SRI B. SUBBAYYA SHETTY.—That has been amended. It is either in the university area or outside.

It is stated 'any institution situated within or outside'. Formerly it was within the University area. Now it is within or outside the University area.

ಶ್ರೀ ಮಳ್ಳೂರು ಆನಂದರಾವ್.—ಏನಿಯಾ ಬಿಟ್ಟು ಹೇಗೆ ಆಗಂತ ದೆ. ?

ಶ್ರೀ ಪಿ. ರಾಮದೇವ್.—ನಮಗೆ ಏತಕ್ಕೆ ಗಾಬರಿ ಎಂದರೆ ಹಿಮಾಲಯ ಪರ್ವತದ ತುಟ್ಟ ತುದಿಯಲಿ ಬ್ರಹ್ಮಚಾರಿಗಳು ಇರುತ್ತಾರೆ. ಅಲ್ಲಿಗೆ ಏನಾದರೂ ಗ್ರಾಂಟ್ಸ್ ಕೊಡುತ್ತಾರೆಯೋ ಏನು ಎಂದು ಗಾಬರಿಯಾಗಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಳೆದ ಮೂರು ವರ್ಷಗಳಿಂದಲೂ ಈ ಅಮೆಂಡ್‌ಮೆಂಟ್‌ಗಳು ಆಗುತ್ತಲೇ ಹೋಗುತ್ತಿವೆ. ಆದರೆ ಈ ಸಿಂಡಿಕೇಟ್‌ನಿಂದ ಸೆನೆಟಿಗೆ ಪ್ರತಿನಿಧಿಗಳನ್ನು ಕಳುಹಿಸುವದಕೆ ಬರುವುದಿಲ್ಲ.

Sri B. Subbayya Shetty.—Some students of this University may like to go in for research to CFTRI in Mysore or to some institution in Bombay or Hyderabad.

Sri S.R. Bommai.—What I am anxious about is when the representatives of the student will be there on the Senate please ask the University to hold the election as early as possible.

Sri B. Subbayya Shetty.—I will enable the University to hold the election as soon as this amendment is passed.

2-00 P.M.

Sri S.R. Bommai.—Will it take place within 3 months ?

Sri B. Subbbyya Shetty.—I cannot say that. We shall enable the University to do so within a few days and it is for the University to hold the elections.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದನ್ನು ಪದೇ ಪದೇ ಏತಕ್ಕೆ ಹೇಳುತ್ತಿದ್ದೇನೆಂದರೆ, ಯೂನಿವರ್ಸಿಟಿಯವರು ಸರ್ಕಾರದಿಂದ ನಮಗೆ ಸರಿಯಾದ ಡೈರೆಕ್ಷನ್ ಇಲ್ಲ ಎಂದು ಹೇಳಿ The Vice-Chancellor will write to the Government again and ask us to how it has to be done. ಆದ್ದರಿಂದ ಇದರಲ್ಲೇ ಸ್ಪಷ್ಟವಾಗಿ, ಈ ರೀತಿ ಚುನಾವಣೆಯಾಗಬೇಕು ಎಂದು ಮಾಡಬಹುದಿತ್ತು. Within 3 months at least will the Hon. Minister see that the elections are held ?

An Hon. Member.—Government has not approved the statutes. According to the Act, all the statutes should be approved by the Government. The Senate meets once in 3 or 4 months. As a result, there is delay.

Sri B. Subbayya Shetty.—That will be looked into.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಒಂದು ಸೆನೆಟ್ ಮೀಟಿಂಗ್‌ನಲ್ಲಿ ಮೆಂಬರ್ ಇದ್ದು ರೂಲ್ಸ್ ಎಲ್ಲಾ ಮಾಡಿ ಕಳುಹಿಸಿ ಕೊಟ್ಟಿದ್ದೇವೆ. Since four months it is not approved.

Sri. B. Subbayya Shetty.—As I said, now that the Universities have been enabled to hold the elections and provision has been made the Universities should be able to hold them at the earliest.

Mr. Speaker.—The question is :

"That the Karnataka State Universities (Amendment) Bill, 1978, as passed by the Legislative Council, be taken into consideration."

The motion was adopted

CLAUSES 2 TO 5

MR. SPEAKER.—As there are no amendments I shall put clause 2 to 5 to the vote of the House. The question is :

"That clauses 2 to 5 do both inclusive stand part of the Bill."

The motion was adopted

"Clauses 2 to 5 both inclusive were added to the Bill."

CLAUSE 1 etc.

MR. SPEAKER.—The question is :

"That clause 1, the Long Title, the Preamble and the Enacting Formula do stand part of the Bill."

The motion was adopted

(Clause 1, the Long Title, the Preamble and the Enacting Formula were added to the Bill.)

MOTION TO PASS

SRI B. SUBBAYYA SHETTY.—Sir, I beg to move ;

"That the Karnataka State Universities (Amendment) Bill, 1978, as passed by the Legislative Council, be passed."

MR. SPEAKER.—The question is :

"That the Karnataka State Universities (Amendment) Bill, 1978 as passed by the Legislative Council, be passed,"

The motion was adopted and the bill was passed

Matter Under Rule 312

re : Failure of school authorities in remitting the examination fee to the 10th S.S.C. examination board

SRI B . SUBBAYYA SHETTY.—Sir, a matter was raised under rule 312 regarding giving hall ticket to a student. The hon. Member Sri Mallur Anand Rao was very much agitated. I wish to state that that student has been given the hall ticket yesterday itself.

MR. SPEAKER.—The House will now adjourn to meet at 1 p.m. on Monday, the 4th April 1978.

The House adjourned Ten, Minutes Past Two of the Clock to meet again at One of the Clock on Monday, the 3rd April 1978